ಸಂಪುಟ 01 | ಸಂಚಿಕೆ 47 | ಭಾನುವಾರ 28 ಡಿಸೆಂಬರ್ 2025 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1. Holy Innocents' Day (Childermas)** ಕ್ರೈಸ್ತ ಧಾರ್ಮಿಕ ಆಚರಣೆ ಕ್ರೈಸ್ತ ಪರಂಪರೆಯ ಪ್ರಕಾರ, ಹೆರೋದ್ ರಾಜನ ಆದೇಶದಿಂದ ಹತ್ಯೆಯಾಗಿದ್ದ ಶಿಶುಗಳ ಸ್ಮರಣಾರ್ಥ ಈ ದಿನವನ್ನು ಆಚರಿಸಲಾಗುತ್ತದೆ. ಕ್ಯಾಥೋಲಿಕ್, ಆಂಗ್ಲಿಕನ್, ಲ್ಯಾಟಿನ್ ಅಮೆರಿಕಾ ದೇಶಗಳಲ್ಲಿ ಹೆಚ್ಚಾಗಿ ಆಚರಿಸುತ್ತಾರೆ.

**02) ರತನ್ ನೇವಲ್ ಟಾಟಾ ಹುಟ್ಟುಹಬ್ಬ**
**ರತನ್ ನೇವಲ್ ಟಾಟಾ** (28 ಡಿಸೆಂಬರ್ 1937 – 9 ಅಕ್ಟೋಬರ್ 2024) ಒಬ್ಬ ಭಾರತೀಯ ಕೈಗಾರಿಕೋದ್ಯಮಿ ಮತ್ತು ಲೋಕೋಪಕಾರಿ. ಅವರು 1991 ರಿಂದ 2012 ರವರೆಗೆ ಟಾಟಾ ಗ್ರೂಪ್ ಮತ್ತು ಟಾಟಾ ಸನ್ಸ್‌ನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು ಮತ್ತು ಅಕ್ಟೋಬರ್ 2016 ರಿಂದ ಫೆಬ್ರವರಿ 2017 ರವರೆಗೆ ಮಧ್ಯಂತರ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು. 2000 ರಲ್ಲಿ, ಅವರು ಭಾರತದ ಮೂರನೇ ಅತ್ಯುನ್ನತ ನಾಗರಿಕ ಗೌರವವಾದ ಪದ್ಮಭೂಷಣವನ್ನು ಪಡೆದರು, ನಂತರ 2008 ರಲ್ಲಿ ದೇಶದ ಎರಡನೇ ಅತ್ಯುನ್ನತ ನಾಗರಿಕ ಗೌರವವಾದ ಪದ್ಮವಿಭೂಷಣವನ್ನು ಪಡೆದರು.

## ಸುಭಾಷಿತ

ದೂರದ ವಸ್ತುವನ್ನು ಪಡೆಯಲು ಸತತ
ಪ್ರಯತ್ನ ಪಡುವವನೇ ವಿವೇಕಶಾಲಿ.

ಸರೋಜಿನಿ ನಾಯ್ಡು

## ಕಲ್ಲೂರು ಗ್ರಾಮದಲ್ಲಿ ನಿವೇಶನ ಹಸ್ತಾಂತರ: ಆಕ್ಷೇಪಣೆ ಆಹ್ವಾನ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 10 (ಕರ್ನಾಟಕ ವಾರ್ತೆ): ಜಿಲ್ಲೆಯ ಕಲ್ಲೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಕಲ್ಲೂರು ಗ್ರಾಮದ ಸ.ನಂ 350/2 ವಿಸ್ತೀರ್ಣ 1 ಎಕರೆ ಜಮೀನಿನಲ್ಲಿ ವಾಸದ ಉದ್ದೇಶಕ್ಕೆ ಭೂಪರಿವರ್ತನೆಯಾಗಿ ವಿನ್ಯಾಸ ಅನುಮೋದಿತ ಬಡಾವಣೆಯಲ್ಲಿನ ನಾಗರಿಕ ಸೌಲಭ್ಯಕ್ಕಾಗಿ 352 ಚ.ಮೀ ವಿಸ್ತೀರ್ಣದ ನಿವೇಶನವನ್ನು ಕಾಯ್ದಿರಿಸಿದೆ.**

ಈ ನಿವೇಶನವನ್ನು ನಾಡ ಕಾರ್ಯಾಲಯ ಕಲ್ಲೂರು ಇದರ ನೂತನ ಕಟ್ಟಡ ನಿರ್ಮಾಣಕ್ಕೆ ಕಂದಾಯ ಇಲಾಖೆಗೆ ಹಸ್ತಾಂತರಿಸಲು ದಿನಾಂಕ 07-11-2025 ರಂದು ನಡೆದ ಗ್ರಾ.ಪಂ ಸಾಮಾನ್ಯ ಸಭೆಯಲ್ಲಿ ನೀರ್ಣಯಿಸಲಾಗಿದ್ದು, ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆ ಇದ್ದಲ್ಲಿ 08 ದಿನದೊಳಗಾಗಿ ಸೂಕ್ತ ಸಮರ್ಥನಿಯ ದಾಖಲೆಗಳೊಂದಿಗೆ ಲಿಖಿತವಾಗಿ ಆಕ್ಷೇಪಣೆಯನ್ನು ಸಲ್ಲಿಸಬಹುದಾಗಿದೆ. ಅವಧಿ ಮೀರಿ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವದಿಲ್ಲ ಎಂದು ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಯ್ಯಪ್ಪ ಸ್ವಾಮಿ ಮಾಲಾಧಾರಿಗಳಿಗೆ ಅನ್ನ ಸಂತರ್ಪಣೆ ಮಾಡುವ ಮೂಲಕ ಭಾವೈಕ್ಯತೆ ಮೆರೆದ ಮುಸ್ಲಿಂ ಮುಖಂಡ ಅಬ್ದುಲ್ ಕರೀಮ್ ಸಾಬ್

ನೈಜ್ಯ ದೆಸೆ ನ್ಯೂಸ್

**ಕವಿತಾಳ: ರಾಯಚೂರು ಜಿಲ್ಲೆಯ ಸಿರವಾರ ತಾಲೂಕಿನ ಕವಿತಾಳ ಪಟ್ಟಣದ ಮುಸ್ಲಿಂ ಮುಖಂಡ ಅಬ್ದುಲ್ ಕರೀಂ ಸಾಬ್ ತಮ್ಮ ಮನೆಯಲ್ಲಿ ಅಯ್ಯಪ್ಪ ಸ್ವಾಮಿ ಮಾಲಾಧಾರಿಗಳಿಗೆ ಅನ್ನ ಸಂತರ್ಪಣೆ ಮಾಡುವ ಮೂಲಕ ಭಾವೈಕ್ಯತೆ ಮೆರೆದಿದ್ದಾರೆ. ಪೂಜಾ ಕಾರ್ಯಕ್ರಮ ಮುಗಿಸಿಕೊಂಡು ಮನೆಗೆ ಬಂದ ಅಯ್ಯಪ್ಪಸ್ವಾಮಿ ಮಾಲಾಧಾರಿಗಳಿಗೆ ಬಿ.ಎ.ಕರೀಂಸಾಬ್ ಸ್ವತಃ ಊಟ ಬಡಿಸಿದರು. ಹೋಳಿಗೆ, ಚಪಾತಿ, ಪಲ್ಯ, ಹಸಿ ತರಕಾರಿ, ಚಿತ್ರಾನ್ನ, ಹಪ್ಪಳ, ಅನ್ನ ಸಾಂಬಾರು ಉಣಬಡಿಸಿದರು.**

'ಅಯ್ಯಪ್ಪ ಸ್ವಾಮಿ ಭಕ್ತರಾಗಲು ಯಾವುದೇ ಜಾತಿ, ಧರ್ಮದ ಭೇದವಿಲ್ಲ. ಹೀಗಾಗಿ ಕಳೆದ ನಾಲ್ಕು ವರ್ಷಗಳಿಂದ ಅಯ್ಯಪ್ಪಸ್ವಾಮಿ ಭಕ್ತರಿಗೆ ಮನೆಯಲ್ಲಿ ಭೋಜನ ವ್ಯವಸ್ಥೆ ಮಾಡುತ್ತಿದ್ದೇನೆ. ಧರ್ಮ, ಜಾತಿ ಎಣಿಸದೇ ಮಾನವಕುಲಕ್ಕೆ ಒಳಿತನ್ನು ಬಯಸುವುದು ಶ್ರೇಷ್ಠ ಎಂಬುದು ನನ್ನ ನಂಬಿಕೆ' ಹಿಂದೂ–ಮುಸ್ಲಿಂ ಭಾವೈಕ್ಯತೆ ಪರಸ್ಪರ ಗೌರವ, ಸಾಮರಸ್ಯ ಮತ್ತು ಸಹೋದರತ್ವದೊಂದಿಗೆ ಬದುಕಬೇಕು ಧಾರ್ಮಿಕ ಆಚರಣೆಗಳ ಭಿನ್ನತೆಗಳ ನಡುವೆಯೂ ಹಬ್ಬಗಳಲ್ಲಿ ಭಾಗವಹಿಸುವುದು, ಒಟ್ಟಾಗಿ ಹಬ್ಬ ಆಚರಿಸುವುದು, ಪ್ರಾರ್ಥನಾ ಸ್ಥಳಗಳಿಗೆ ಭೇಟಿ ನೀಡಿ ಪರಸ್ಪರ ಒಳಿತಿಗಾಗಿ ಹಾರೈಸುವಂತಹ ಹಲವಾರು ನಿದರ್ಶನಗಳ ಮೂಲಕ ವ್ಯಕ್ತವಾಗುತ್ತದೆ, ಭಾರತದಂತಹ ದೇಶದಲ್ಲಿ ಇದು ಒಂದು ದೊಡ್ಡ ಶಕ್ತಿಯಾಗಿದೆ.

ನಾವು ಪ್ರಸಾದ ವ್ಯವಸ್ಥೆ ಮಾಡುವುದು ಕುಟುಂಬದವರೆಲ್ಲ ಸೇವೆ ಮಾಡುವುದು ನಮ್ಮ ಮನಸ್ಸಿಗೆ ತೃಪ್ತಿ ಕೊಡುತ್ತದೆ ಎಂದು ಕರೀಂಸಾಬ್ ಹೇಳಿದರು...ಅಯ್ಯಪ್ಪ ಭಕ್ತರಿಗೆ ಯಾವುದೇ ಜಾತಿ, ಧರ್ಮದ ಭೇದ?ಭಾವ ಇಲ್ಲ. ಹಿಂದೂ, ಮುಸ್ಲಿಂ, ಕ್ರೈಸ್ತ ಹೀಗೆ ಯಾವುದೇ ಧರ್ಮದವರ ಮನೆಯಲ್ಲಿ ಪೂಜೆ ಮಾಡಲು ಮತ್ತು ಪ್ರಸಾದ ಸ್ವೀಕರಿಸಲು ಅವಕಾಶವಿದೆ. ಭಕ್ತಿಯಿಂದ ಆಹ್ವಾನ ನೀಡಿದರೆ ನಾವು ತಿರಸ್ಕರಿಸುವುದಿಲ್ಲ' ಎಂದು ಗುರುಸ್ವಾಮಿ ಚನ್ನಯ್ಯ ಸ್ವಾಮಿ ತಿಳಿಸಿದರು..ಈ ಭಾಗದಲ್ಲಿ ಬಿ.ಎ.ಕರೀಂಸಾಬ್ ಅವರು ಸತತ ನಾಲ್ಕು ವರ್ಷಗಳಿಂದ ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡುತ್ತಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಈ ಪ್ರಸಾದ ವ್ಯವಸ್ಥೆಯ



ಕಾರ್ಯಕ್ರಮದಲ್ಲಿ ಕವಿತಾಳ್ ಪೀಠದ ಎಲ್ಲಾ ಅಯ್ಯಪ್ಪ ಸ್ವಾಮಿ ಮಾಲಾಧಾರಿಗಳು, ಬಿ ಅಬ್ದುಲ್ ಕರೀಮ್ ಸಾಬ್ ಅವರ ಕುಟುಂಬದವರಾದ ಎಂ ಎ ವಹಾಬ್, ಇರ್ಫಾನ್ ಕೆ, ಮಹಮ್ಮದ್ ಕಲೀಮ್, ಇನ್ನಿತರರು ಸೇವೆ ಸಲ್ಲಿಸಿದರು.

""ಅಯ್ಯಪ್ಪ ಸ್ವಾಮಿಗಳು ಸರ್ವ ಧರ್ಮಗಳ ಪ್ರತಿನಿಧಿಯಾಗಿದ್ದಾರೆ, ವಿಶೇಷವಾಗಿ ಹಿಂದೂ ಧರ್ಮದಲ್ಲಿ ಶೈವ ಮತ್ತು ವೈಷ್ಣವ ಪಂಥಗಳ ಏಕತೆಯನ್ನು ಪ್ರತಿನಿಧಿಸುತ್ತಾರೆ (ಶಿವ ಮತ್ತು ವಿಷ್ಣುವಿನ ಮಗ), ಮತ್ತು ಇತರ ಧರ್ಮಗಳ ಸಂತರನ್ನು ಗೌರವಿಸುತ್ತಾರೆ, ಉದಾಹರಣೆಗೆ ಅವರ ಆಪ್ತ ಸಹಾಯಕ ವಾವರ್ (ವಾವರ್ ಸ್ವಾಮಿ) ಅವರ ಮಸೀದಿ ಶಬರಿಮಲೆಯಲ್ಲಿರುವುದು, ಇದು ಎಲ್ಲ ಧರ್ಮಗಳ ಭಕ್ತರನ್ನು ಅಪ್ಪಿಕೊಳ್ಳುವ ಅಯ್ಯಪ್ಪನ ವಿಶಾಲ ಮನೋಭಾವವನ್ನು ತೋರಿಸುತ್ತದೆ. ಏಕತೆಯ ಸಂಕೇತವಾಗಿ ಅಯ್ಯಪ್ಪ: ಶಿವ ಮತ್ತು ವಿಷ್ಣುವಿನ ಸಂಯೋಗ: ಅಯ್ಯಪ್ಪನು ಶಿವ ಮತ್ತು ವಿಷ್ಣುವಿನ (ಮೋಹಿನಿ ರೂಪದಲ್ಲಿ) ಮಗನಾಗಿರುವುದರಿಂದ, ಹಿಂದೂ ಧರ್ಮದ ಪ್ರಮುಖ ಪಂಥಗಳಾದ ಶೈವ ಮತ್ತು ವೈಷ್ಣವದ ನಡುವೆ ಭಿನ್ನತೆ ಇಲ್ಲ, ಎರಡೂ ಒಂದೇ ಅಂತಿಮ ಸತ್ಯದ ಅಭಿವ್ಯಕ್ತಿಗಳು ಎಂದು ತೋರಿಸುತ್ತಾರೆ.

ಧರ್ಮದ ಸಾರ: ಅವರ ಜೀವನವು ಶೈವರು ಮತ್ತು ವೈಷ್ಣವರು ಒಟ್ಟಾಗಿ ಪೂಜಿಸಲು ಪ್ರೇರಣೆ ನೀಡುತ್ತದೆ. ಅಯ್ಯಪ್ಪ ಮತ್ತು ಇತರ ಧರ್ಮಗಳು: ವಾವರ್ ಸ್ವಾಮಿ: ಅಯ್ಯಪ್ಪನ ಯಾತ್ರಾ ಮಾರ್ಗದಲ್ಲಿ ವಾವರ್ ಸ್ವಾಮಿಯ ಮಸೀದಿಯಿದೆ. ತನ್ನ ವಿಶ್ವಾಸಾರ್ಹ ಸಹಾಯಕನಾಗಿ ಮಾಡಿಕೊಂಡ ಕಥೆ ಇದೆ. ಸೌಹಾರ್ದತೆ: ವಾವರ್ ಅರೇಬಿಯಾದಿಂದ ಬಂದ ಮುಸ್ಲಿಂ ಸಂತ ಎಂದು ಹೇಳಲಾಗಿದ್ದು, ಇದು ಅಯ್ಯಪ್ಪನು ಇತರ ಧರ್ಮಗಳ ಸಂತರು ಮತ್ತು ಪೌರಾಣಿಕ ವ್ಯಕ್ತಿಗಳನ್ನು ಸ್ವೀಕರಿಸುವ ಹಿಂದೂ ಸಂಪ್ರದಾಯವನ್ನು ತೋರಿಸುತ್ತದೆ. ಸಾರ್ವತ್ರಿಕತೆ: ಶಬರಿಮಲೆಯಲ್ಲಿ ಹಿಂದೂ ಭಕ್ತರು ವಾವರ್ ಮಸೀದಿಯಲ್ಲಿ ಪ್ರಾರ್ಥಿಸುವುದು, ಅಯ್ಯಪ್ಪನ ಸರ್ವ ಧರ್ಮ ಸಿದ್ಧಾಂತಕ್ಕೆ ಸಾಕ್ಷಿಯಾಗಿದೆ, ಮತ್ತು ಅವರು ಜಾತಿ, ಮತ ಭೇದವಿಲ್ಲದೆ ಎಲ್ಲರನ್ನೂ ರಕ್ಷಿಸುತ್ತಾರೆ.

ಸಾರಾಂಶದಲ್ಲಿ, ಅಯ್ಯಪ್ಪ ಸ್ವಾಮಿಯು ಹಿಂದೂ ಧರ್ಮದೊಳಗಿನ ಏಕತೆ ಮತ್ತು ವಿವಿಧ ಧರ್ಮಗಳ ನಡುವಿನ ಸೌಹಾರ್ದತೆ, ಗೌರವ ಮತ್ತು ಸಹಬಾಳ್ವೆಯ ಸಂಕೇತವಾಗಿ ಪೂಜಿಸಲ್ಪಡುತ್ತಾರೆ. "" ಚನ್ನಯ್ಯ ಗುರು ಸ್ವಾಮಿ ಕವಿತಾಳ ""ಸರ್ವ ಧರ್ಮ ಸಹಿಷ್ಣುತೆ ಎಂದರೆ ಎಲ್ಲಾ ಧರ್ಮಗಳನ್ನು ಸಮಾನವಾಗಿ ಗೌರವಿಸುವುದು, ಸ್ವೀಕರಿಸುವುದು ಮತ್ತು ಪರಸ್ಪರ ಸಹಬಾಳ್ವೆ ನಡೆಸುವುದು. ಇದು ಮಹಾತ್ಮ ಗಾಂಧಿಯವರ 'ಸರ್ವ ಧರ್ಮ ಸಮಭಾವ'ದಂತಹ ಪರಿಕಲ್ಪನೆಯಾಗಿದ್ದು, ಭಾರತದಂತಹ ವೈವಿಧ್ಯಮಯ ದೇಶದ ಜಾತ್ಯತೀತ ತತ್ವಗಳ ಆಧಾರವಾಗಿದೆ; ಇದು ಎಲ್ಲಾ ನಂಬಿಕೆಗಳ ಜನರು ಶಾಂತಿಯುತವಾಗಿ ಬದುಕಲು, ಪರಸ್ಪರ ಗೌರವದಿಂದ ವ್ಯವಹರಿಸಲು ಮತ್ತು ದೇಶದ ಏಕತೆ ಹಾಗೂ ಅಭಿವೃದ್ಧಿಗೆ ಕೊಡುಗೆ ನೀಡಲು ಪ್ರೋತ್ಸಾಹಿಸುತ್ತದೆ. ಗಾಂಧಿಯವರ ಕೊಡುಗೆ: ಮಹಾತ್ಮ ಗಾಂಧಿಯವರು ಹಿಂದೂ-ಮುಸ್ಲಿಂ ಸಂಘರ್ಷ ತಡೆಯಲು ಈ ಪರಿಕಲ್ಪನೆಯನ್ನು ಬಳಸಿದರು. ಎಲ್ಲಾ ಧರ್ಮಗಳೂ ಒಂದೇ ಗಮ್ಯಸ್ಥಾನಕ್ಕೆ ಸಾಗುವ ಮಾರ್ಗಗಳೆಂದು ಅವರು ನಂಬಿದ್ದರು.







ಭಾರತೀಯ ಜಾತ್ಯತೀತತೆ: ಭಾರತದ ಜಾತ್ಯತೀತತೆಯು ಧರ್ಮಗಳನ್ನು ಪ್ರತ್ಯೇಕಿಸುವುದಲ್ಲ, ಬದಲಿಗೆ ಎಲ್ಲಾ ಧರ್ಮಗಳನ್ನು ಸ್ವೀಕರಿಸಿ, ಗೌರವಿಸುವುದಾಗಿದೆ. 'ವಸುಧೈವ ಕುಟುಂಬಕಂ' (ಜಗತ್ತು ಒಂದು ಕುಟುಂಬ) ಎಂಬುದು ಇದರ ಮೂಲ ತತ್ವ. ವಿವಿಧ ಧಾರ್ಮಿಕ ನಂಬಿಕೆಗಳನ್ನು ನಿಗ್ರಹಿಸದೆ, ಅವುಗಳ ಅಸ್ತಿತ್ವವನ್ನು ಸ್ವೀಕರಿಸುವುದು, ಅರ್ಥೈಸಿಕೊಳ್ಳುವುದು ಮತ್ತು ಗೌರವಿಸುವುದೇ ಧಾರ್ಮಿಕ ಸಹಿಷ್ಣುತೆ. ಪರಸ್ಪರ ಗೌರವ, ಇದು ಕೇವಲ ಸಹಿಸಿಕೊಳ್ಳುವುದಲ್ಲ, ಬದಲಿಗೆ ಪರಸ್ಪರ ತಿಳುವಳಿಕೆ, ಗೌರವ ಮತ್ತು ಸಹಬಾಳ್ವೆಯನ್ನು ಬೆಳೆಸುವುದು ಸಮಾಜಕ್ಕೆ ಲಾಭ, ಸಹಿಷ್ಣುತೆಯು ಸಮಾಜದಲ್ಲಿ ಶಾಂತಿ, ಸಾಮರಸ್ಯ ಮತ್ತು ಅಭಿವೃದ್ಧಿಯನ್ನು ತರುತ್ತದೆ. ವೈವಿಧ್ಯತೆಗಳನ್ನು ಸ್ವಾಗತಿಸುವ ಮೂಲಕ ಪ್ರಗತಿ ಸಾಧ್ಯ ಎಂದು ನಂಬಲಾಗಿದೆ. ಶ್ರೀ ರಾಮಕೃಷ್ಣ ಪರಮಹಂಸರು ಮತ್ತು ಬಸವಣ್ಣನವರಂತಹ ಆಧ್ಯಾತ್ಮಿಕ ನಾಯಕರು ಸರ್ವ ಧರ್ಮ ಸಹಿಷ್ಣುತೆ ಮತ್ತು ದಯೆಯ ಸಂದೇಶವನ್ನು ಸಾರಿದ್ದಾರೆ. ಭಾರತದಲ್ಲಿ ಬೌದ್ಧ, ಜೈನ, ಸಿಖ್ ಧರ್ಮಗಳು ಹುಟ್ಟಿದ್ದು, ಜಾಗತಿಕ ಧರ್ಮಗಳಿಗೂ ನೆಲೆಯಾಗಿದೆ. ಜನರು ಹಬ್ಬಗಳನ್ನು ಹಂಚಿಕೊಳ್ಳುತ್ತಾರೆ ಮತ್ತು ಪರಸ್ಪರ ಬೆಂಬಲಿಸುತ್ತಾರೆ.

## ಹೆಗ್ಗಡದಿನ್ನಿ ಗ್ರಾಮದಲ್ಲಿ ಕಲುಷಿತ ನೀರು ಕುಡಿದು 40 ಕುರಿಗಳ ಸಾವು



ನೈಜ್ಯ ದೆಸೆ ನ್ಯೂಸ್

**ಅರಕೇರಾ: ಕಲುಷಿತ ನೀರು ಕುಡಿದು 40 ಕುರಿಗಳು ಸಾವನ್ನಪ್ಪಿರುವ ದಾರುಣ ಘಟನೆ ತಾಲ್ಲೂಕಿನ ಹೆಗ್ಗಡದಿನ್ನಿ ಗ್ರಾಮದ ಹೊರಹೊಲಯದಲ್ಲಿ ಶನಿವಾರ ನಡೆದಿದೆ.**

ಮಲ್ಲೆನಾಯಕನದೊಡ್ಡಿ ಗ್ರಾಮದ ಭೀಮಯ್ಯ ನಾಯಕ ತಂದೆ ಹನುಮಂತರಾಯ ಇವರಿಗೆ ಸೇರಿದ 35 ಕುರಿಗಳು ಹಾಗೂ ಕೊತ್ತದೊಡ್ಡಿ ಗ್ರಾಮದ ಲಕ್ಷ್ಮಣ ತಂದೆ ಸಾಬಗೌಡ ಇವರಿಗೆ ಸೇರಿದ 5 ಕುರಿಗಳು ಒಟ್ಟು 40 ಕುರಿಗಳು ಸಾವನ್ನಪ್ಪಿರುವ ಕುರಿತು ಮಾಹಿತಿ ಲಭ್ಯವಾಗಿದೆ.

**ಸುದ್ದಿ ತಿಳಿದ ಶಾಸಕಿ. ಕರೆಮ್ಮ ಜಿ. ನಾಯಕ ಘಟನಾ ಸ್ಥಳಕ್ಕೆ ಭೇಟಿ ನೀಡಿ ಕುರಿಗಳ ಮಾಲಿಕನಿಗೆ ಸಾಂತ್ವನ ಹೇಳಿದರು. ಸರ್ಕಾರದಿಂದ ಸಿಗುವ ಪರಿಹಾರವನ್ನು ದೊರಕಿಸಿಕೊಡುವ ಭರವಸೆ ನೀಡಿದರು. ಕಂದಾಯ ಇಲಾಖೆ ಹಾಗೂ ಪಶು ಇಲಾಖೆಯ ಅಧಿಕಾರಿ ಸಿಬ್ಬಂದಿ ಇದ್ದರು.**

ಸುಮಾರು 250 ಕುರಿಗಳನ್ನು ಮೇಯಿಸಲು ಕರೆದುಕೊಂಡು ಹೋಗಿದ್ದರು. ಹಳ್ಳದ ನೀರಿನೊಂದಿಗೆ ಕಲುಷಿತಗೊಂಡ ನೀರು ಬೆರೆತ್ತಿದ್ದು. ಅದೇ ನೀರನ್ನು ಕುರಿಗಳು ಕುಡಿದು ಸ್ಥಳದಲ್ಲೇ ಸಾವನ್ನಪ್ಪಿವೆ. ಸ್ಥಳಕ್ಕಾಗಿಮಿಸಿದ ಪಶು ವೈದ್ಯರು ಇನ್ನೂ ಅಸ್ವಸ್ಥಗೊಂಡ ಕುರಿಗಳಿಗೆ ಚಿಕಿತ್ಸೆ ನೀಡಿ ಸಾವಿನ ದವಡೆಯಿಂದ ಪಾರು ಮಾಡಿದ್ದಾರೆ. ಈ ಕುರಿತು ಗಬ್ಬೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಬಸವೇಶ್ವರ ದೇವಸ್ಥಾನದ ಗರ್ಭಗುಡಿ ಕಲ್ಲುಗಳಿಗೆ ಭಕ್ತರಿಂದ ಪೂಜೆ

ನೈಜ್ಯ ದೆಸೆ ನ್ಯೂಸ್

**ಕನಕಗಿರಿ: ಡಿ 27 ತಾಲೂಕಿನ ಹುಲಿಹೈದರ ಗ್ರಾಮದ ಹೊರವಲಯದಲ್ಲಿರುವ ಬಸವೇಶ್ವರ ದೇವಸ್ಥಾನದ ನಿರ್ಮಾಣ ಕಾರ್ಯ ಭರದಿಂದ ಸಾಗಿದ್ದು ಶುಕ್ರವಾರ ದೇಗುಲದ ಗರ್ಭಗುಡಿಯ ನಿರ್ಮಾಣದ ಕಲ್ಲುಗಳನ್ನು ಭಕ್ತರು ಭಕ್ತಿಪೂರ್ವಕವಾಗಿ ಸ್ವಾಗತಿಸಿದರು.**

ಕಲ್ಲುಗಳನ್ನು ಹೊತ್ತು ತಂದಿದ್ದ ವಾಹನವನ್ನು ದೇಗುಲದವರೆಗೆ ಭಜನೆಯೊಂದಿಗೆ ಮೆರವಣಿಗೆ ನಡೆಯಿತು. ಮಹಿಳೆಯರು ಕಳಸ ಹೊತ್ತು ಪಾದಯಾತ್ರೆ ಮೂಲಕ ದೇಗುಲದವರೆಗೆ ಬಂದರು. ದೇಗುಲದ ಜಾಗದಲ್ಲಿ ಕಲ್ಲುಗಳಿಗೆ ಪೂಜೆ ಸಲ್ಲಿಸಿ ಭಕ್ತಿ ಸಮರ್ಪಣೆ ಮಾಡಲಾಯಿತು. ಈ ವೇಳೆ ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ಹಾಗೂ ದೇವಸ್ಥಾನ



ನಿರ್ಮಾಣದ ಮುಂದಾಳು ರವೀಂದ್ರ ಸಜ್ಜನ್, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಸುಜಾತ ಹನುಮೇಶ ನಾಯಕ, ಗ್ರಾಮ ಪಂಚಾಯಿತಿ ಸದಸ್ಯರಾದ ರಾಜಾಸಾಬ ಕಟ್ಟಿಮನಿ, ಶಿವಶಂಕ್ರಪ್ಪ ಚೆನ್ನದಾಸರ ದೇವಸ್ಥಾನದ ಪ್ರಮುಖರಾದ ವಿಶ್ವನಾಥ ಸಜ್ಜನ, ನಾಗಪ್ಪ ಸಜ್ಜನ, ಶೇಖರಪ್ಪ ಗದ್ದಿ, ಮಲ್ಲಪ್ಪ ಸಜ್ಜನ್, ಅಮರೇಶ ಸಜ್ಜನ್, ಶಿವಕುಮಾರ್ ಸಜ್ಜನ್, ಶರಣಪ್ಪ ಸಜ್ಜನ್, ಗ್ರಾಮದ ಮುಖಂಡರಾದ ಗೋಸ್ಲೆಪ್ಪ ಗದ್ದಿ, ಅಮರಪ್ಪ ಗದ್ದಿ, ಹನುಮಂತಪ್ಪ ಗೋಡಿ, ಭಜನೆ ಸಂಘದ ಪದಾಧಿಕಾರಿಗಳು ಹಾಗೂ ಭಕ್ತರು ಭಾಗವಹಿಸಿದ್ದರು.

## ಬಸವ ಗೀತೆ ಗ್ರಂಥ ಲೋಕಾರ್ಪಣಾ ಬಸವ ಗೀತೆ ಸತ್ಯಸಂವಾದ ಜ್ಞಾನ ಹರಡುವ ಮಹಾ ಕೃತಿ :ಬಿ.ಜಿ. ಹುಲಿ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಬಿ.ವಿ.ಆರ್ ಇ-ಟೆಕ್ನೋ ಶಾಲೆಯಲ್ಲಿ ಶ್ರೀ ಬಸವ ಸೇವಾ ಪ್ರತಿಷ್ಠಾನ ಹಾಗೂ ಸುದ್ದಿಮೂಲ ದಿನಪತ್ರಿಕೆ ರಾಯಚೂರು, ಬಸವ ಕೇಂದ್ರ ಮಾನ್ವಿ, ಶರಣ ಸಾಹಿತ್ಯ ಪರಿಷತ್ತು ಮಾನ್ವಿ, ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತು ಮಾನ್ವಿ ಹಾಗೂ ತಾಲೂಕಾ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟ ಮಾನ್ವಿ ಇವರ ಸಂಯುಕ್ತ ಆಶ್ರಯದಲ್ಲಿ ಬಸವ ಗೀತೆ ? ಸತ್ಯಸಂವಾದ (9 ಸಂಪುಟಗಳ ಗುಚ್ಛ) ಗ್ರಂಥ ಲೋಕಾರ್ಪಣಾ ಸಮಾರಂಭವು ಅತ್ಯಂತ ಅರ್ಥಪೂರ್ಣವಾಗಿ ನಡೆಯಿತು.**

ಕಾರ್ಯಕ್ರಮದಲ್ಲಿ ನಿವೃತ್ತ ಉಪನ್ಯಾಸಕರಾದ ಬಿ.ಜಿ. ಹುಲಿ ಅವರು ಗ್ರಂಥಗಳನ್ನು ಲೋಕಾರ್ಪಣೆ ಮಾಡಿ ಪುಸ್ತಕ ಕುರಿತು ಮಾತನಾಡುತ್ತಾ, ಪುಸ್ತಕದ ಓದು ಮಸ್ತಕದ ಜ್ಞಾನವನ್ನು ವೃದ್ಧಿಸುತ್ತದೆ. ಮೊದಲ ಹಾಗೂ ಎರಡನೇ ಸಂಪುಟಗಳು ಈಗಾಗಲೇ




ಲೋಕಾರ್ಪಣೆಯಾಗಿದ್ದರೂ, ಎಲ್ಲಾ ಒಂಬತ್ತು ಸಂಪುಟಗಳನ್ನು ಮಾನ್ವಿಯಲ್ಲಿ ಲೋಕಾರ್ಪಣೆ ಮಾಡುವ ಮೂಲಕ ಇಲ್ಲಿನ ಜನರಿಗೆ ಬಸವ ಚಿಂತನೆಯ ಜ್ಞಾನ ತಲುಪಲಿ ಎಂಬ ಉದ್ದೇಶವಿದೆ ಎಂದರು. ಒಂಬತ್ತು ಸಂಪುಟಗಳಿಗೆ ಒಂಬತ್ತು ಗಣ್ಯರು ಮುನ್ನುಡಿ ಬರೆದಿದ್ದು, ಮೊದಲ ಸಂಪುಟಕ್ಕೆ ತಾವು ಮುನ್ನುಡಿ ಬರೆದಿರುವುದಾಗಿ ತಿಳಿಸಿದರು.

ಉಳಿದ ಎಂಟು ಸಂಪುಟಗಳಿಗೆ ಹಿರಿಯ ಸಾಹಿತಿಗಳು ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಉನ್ನತ ಹುದ್ದೆಯಲ್ಲಿರುವವರು ಮುನ್ನುಡಿ ಬರೆದಿರುವುದರಿಂದ ಈ ಗ್ರಂಥದ ಮಹತ್ವವನ್ನು ಅರ್ಥಮಾಡಿಕೊಳ್ಳಬಹುದು ಎಂದು ಹೇಳಿದರು. ಕಾರ್ಯಕ್ರಮವನ್ನು ನಿವೃತ್ತ ಶಿಕ್ಷಣಾಧಿಕಾರಿಗಳಾದ ಡಿ.ಜಿ. ಕರ್ಕಿಹಳ್ಳಿ ಅವರು ಉದ್ಘಾಟಿಸಿದರು. ಶರಣ ಸಾಹಿತ್ಯ ಪರಿಷತ್ತು ಮಾನ್ವಿಯ ಅಧ್ಯಕ್ಷರಾದ ಕೆ.ಈ. ನರಸಿಂಹ ಅವರು ಪ್ರಾಸ್ತಾವಿಕ ಭಾಷಣ ಮಾಡುತ್ತಾ, ಬಸವ ಗೀತೆ ? ಸತ್ಯಸಂವಾದದ ಒಂಬತ್ತು ಸಂಪುಟಗಳು ಅಷ್ಟೊಂದು ಆಳವಾದ ವಿಷಯವನ್ನು ಒಳಗೊಂಡಿದ್ದು, ಪ್ರತಿಯೊಂದು ಸಂಪುಟಕ್ಕೂ ಡಾಕ್ಟರೇಟ್ ಮಾಡಬಹುದಾದಷ್ಟು ಸಂಶೋಧನಾ ಮೌಲ್ಯವಿದೆ ಎಂದರು. ಬಸವ ಗೀತೆಯಲ್ಲಿ ಕೇವಲ ಬಸವಣ್ಣನಷ್ಟೇ ಅಲ್ಲ ಕೃಷ್ಣ, ಪೈಗಂಬರ ಹಾಗೂ ಯೇಸುಕ್ರಿಸ್ತನಂತಹ ಮಹಾತ್ಮರ ತತ್ತ್ವವೂ ಕಾಣಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಸವ ಕೇಂದ್ರದ ಗೌರವಾಧ್ಯಕ್ಷರಾದ ಡಾ. ಬಸವಪ್ರಭು ಪಾಟೀಲ್ ಬೆಟ್ಟದೂರು ಅವರು ವಹಿಸಿದ್ದರು. ಬಸವ ಗೀತೆ ಸತ್ಯಸಂವಾದ ಗ್ರಂಥದ ಲೇಖಕರಾದ ಹಾಗೂ ಸುದ್ದಿಮೂಲ ದಿನಪತ್ರಿಕೆಯ ಸಂಪಾದಕರಾದ ಬಸವರಾಜ ಸ್ವಾಮಿ ಅವರು ಮಾತನಾಡಿದರು. ಈ ಸಂದರ್ಭದಲ್ಲಿ ಬಸವ ಕೇಂದ್ರದ ಅಧ್ಯಕ್ಷರಾದ ಜಿ.ಎಂ. ರಂಗಪ್ಪ ಮೇದಾ, ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶರಣಬಸವ ನೀರಮಾನ್ವಿ, ತಾಲೂಕಾ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷರಾದ ರಾಜಾ ಸುಭಾಷಚಂದ್ರ ನಾಯಕ, ನಿಕಟಪೂರ್ವ ಅಧ್ಯಕ್ಷರಾದ ಹೆಚ್. ಶರ್ಫುದ್ದೀನ್ ಪೋತ್ನಾಳ್, ಕಸಾಪ ಮಾಜಿ ಅಧ್ಯಕ್ಷರಾದ ಮೂಕಪ್ಪ ಕಟ್ಟಿಮನಿ, ಬಿ.ವಿ.ಆರ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಬಿ.ವಿ. ರೆಡ್ಡಿ, ಸುದ್ದಿಮೂಲ ವರದಿಗಾರರಾದ ಪಿ. ಪರಮೇಶ ಸೇರಿದಂತೆ ಸಾಹಿತಿಗಳು ಹಾಗೂ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಮತ್ತು ಸಾಹಿತ್ಯಾಸಕ್ತರು ಭಾಗವಹಿಸಿದ್ದರು.

## ಸಾಹಿತ್ಯ ಸಿಂಚನ

ಕಟುವಾಸ್ತವ ದರ್ಶನ.!

ನಿಜಕ್ಕೂ ಇಲ್ಲಿ ಪ್ರತಿಯೊಬ್ಬರದೂ
ಪ್ರತಿನಿತ್ಯ ಪ್ರತಿಕ್ಷಣಕು ಅವರವರ
ಲಾಭ ಲಾಭಿಗಷ್ಟೆ ಬದುಕು ಗೆಳೆಯ
ಸತ್ಯಮಿಥ್ಯ ತಿಳಿಯದ ಅಯೋಮಯ.!

ಅನುದಿನವೂ ಅಡಿಗಡಿಗು ಸಹ
ಸದಾ ಲಾಭ-ನಷ್ಟಗಳ ಲೆಕ್ಕಾಚಾರ
ಅಕ್ಷರಶಃ ಹಸಿ ಹಸಿ ಹುಸಿನುಡಿ
ಹುಸಿನಗೆ ಹುಸಿನಡೆಯ ಶಿಷ್ಟಾಚಾರ.!

ಕೆಲವರದು ಬಿತ್ತದೆ ಬೆಳೆವ ಹುನ್ನಾರ
ಮತ್ತೆ ಕೆಲವರದು ಬಿತ್ತಿ ಬೆಳೆವ ಆಚಾರ
ಕೆಲವರಿಗೆ ಕೊಡು ಪಡು ವ್ಯವಹಾರ
ಇನ್ನು ಕೆಲವರಿಗೆ ಬರೀ ಪಡೆವ ವಿಚಾರ.!

ಹಲವರದು ಒಳಗೊಳಗೆ ಗುಣಾಕಾರ
ಇನ್ನಷ್ಟರದು ಅಲ್ಲಲ್ಲೇ ಭಾಗಾಕಾರ
ಮತ್ತಷ್ಟರದು ಬರಿ ಒಣ ಠೇಂಕಾರ
ಮಗದಷ್ಟರದು ಎಲ್ಲಕೂ ಹೂಂಕಾರ.!

ಅನೇಕರದು ಸಮಯದಂತೆ ಸಂಚಾರ
ಬಹಳಷ್ಟರದು ಹಪಹಪಿಪ ಹಹಾಕಾರ
ಸ್ವಲ್ಪಜನರದ್ದು ದರ್ಪದ ದುರಾಚಾರ
ಮಿಕ್ಕವರದು ಕಾರ್ಯಸಾಧು ಕಾರಭಾರ.!

ಕುತಂತ್ರಿಜನದ್ದು ಬಗೆಬಗೆ ಅನಾಚಾರ
ಕೊಂಚಜನರದ್ದು ಗ್ರಹಣ ಗ್ರಹಚಾರ
ವಿಕೃತಜನರದ್ದು ಬರಿದೆ ಹಿಂಸಾಚಾರ
ವಿಕ್ಷಿಪ್ತಜನದ್ದು ಬಗೆಬಗೆ ವಾಮಾಚಾರ.!

ಲಾಭಕ್ಕಾಗಿಯೇ ಸಕಲ ಭ್ರಷ್ಟಾಚಾರ
ಲಾಭ ಲಾಭಿಗಳಿಗಾಗಿ ಸಮಸ್ತ ವಿಕಾರ
ಲಾಭವಿಲ್ಲದಿರೆ ಕೇವಲ ಕಾಟಾಚಾರ
ಅರಸಿದರು ಸಿಗದು ಮಮಕಾರ ಸಂಸ್ಕಾರ.!

ಗೆಳೆಯ ತತ್ವ-ಸತ್ವಗಳಿಗಿಲ್ಲ ಇಲ್ಲಿ ಅರ್ಥ
ನೀತಿ ಪ್ರೀತಿ ವೇದಾಂತಗಳೆಲ್ಲವೂ ವ್ಯರ್ಥ
ಕಟ್ಟಕಡೆಗಿಲ್ಲಿ ಉಳಿವುದೊಂದೇ ಸ್ವಾರ್ಥ
ಸಾರ್ಥಕ್ಕೆ ತಕ್ಕಂತೆ ನಡೆನುಡಿ ಯಥಾರ್ಥ.!

ಅದಕೆ ಕಾಲಕ್ಕೆ ತಕ್ಕಂತೆ ಆಚಾರ ವಿಚಾರ
ಲಾಭ-ಲಾಭಿಗಳಿಗೆ ತಕ್ಕಂತೆ ಸ್ವೇಚ್ಛಾಚಾರ
ಇದುವೆ ಯುಗಯುಗದ ಜಗ ಲೆಕ್ಕಾಚಾರ
ಈ ಬದುಕುಗಳ ಬದಲಾಗದ ಸಮಾಚಾರ.!

ಎ.ಎನ್.ರಮೇಶ್.ಗುಬ್ಬಿ.

## ಸರ್ಕಾರಿ ನೌಕರರ ಕ್ರೀಡಾಕೂಟ, ಸಾಂಸ್ಕೃತಿಕ ಸ್ಪರ್ಧೆಗಳ ನೋಂದಣಿಗೆ ಡಿಸೆಂಬರ್ 31 ಕೊನೆಯ ದಿನ

ನೈಜ್ಯ ದೆಸೆ ನ್ಯೂಸ್

ರಾಯಚೂರು: ಡಿಸೆಂಬರ್ 27 (ಕರ್ನಾಟಕ ವಾರ್ತೆ): ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಜಿಲ್ಲಾ ಸರಕಾರಿ ನೌಕರರ ಸಂಘ ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ 2025-26ನೇ ಸಾಲಿನ ರಾಯಚೂರು ಜಿಲ್ಲಾ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ಸಂಘಟನೆಯನ್ನು ಜನವರಿ 8 ಹಾಗೂ 9ರ ಬೆಳಿಗ್ಗೆ 10 ಗಂಟೆಗೆ ನಗರದ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದ ಹೊರಾಂಗಣ ಹಾಗೂ ಒಳಾಂಗಣ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದ್ದು, ಸ್ಪರ್ಧಾಳುಗಳು ಡಿಸೆಂಬರ್ 31ರೊಳಗಾಗಿ ನೋಂದಾಯಿಸಿಕೊಳ್ಳಬಹುದಾಗಿದೆ.

ಆನ್‌ಲೈನ್ ಲಿಂಕ್ : https://form.svhrt.com/6931869b0a0bd8c6f89eda9f ಮೂಲಕ ಜಿಲ್ಲೆಯ ಸರ್ಕಾರಿ ನೌಕರ ಸ್ಪರ್ಧಾಳುಗಳು ನೋಂದಣಿ ಮಾಡಿಕೊಂಡು ಕ್ರೀಡಾಕೂಟದಲ್ಲಿ ಭಾಗವಹಿಸಬಹುದು. ಆಫ್‌ಲೈನ್ ನೋಂದಣಿಗೆ ಅವಕಾಶವಿರುವುದಿಲ್ಲ. ಕ್ರೀಡಾ ತರಬೇತುದಾರರು, ಆರು ತಿಂಗಳೊಳಗಾಗಿ ನೇಮಕಗೊಂಡವರು, ತಾತ್ಕಾಲಿಕವಾಗಿ ನೇಮಕಗೊಂಡವರು, ಪ್ಯಾರಾ ಮಿಲಟರಿ, ಪೊಲೀಸ್, ಸಿ.ಆರ್.ಪಿ.ಎಫ್, ಅಗ್ನಿಶಾಮಕ ದಳ ಮೊದಲಾದ ಸಮವಸ್ತ್ರಧಾರಿತ ಸಿಬ್ಬಂದಿ ಈ ಕ್ರೀಡಾಕೂಟದಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಈ ಕ್ರೀಡಾಕೂಟದಲ್ಲಿ ಭಾಗವಹಿಸಲು ಇಚ್ಛಿಸುವ ಎಲ್ಲಾ ಖಾಯಂ ಸರ್ಕಾರಿ ನೌಕರರು ತಾವು ಕೆಲಸ ಮಾಡುವ ಕಚೇರಿ ಮುಖ್ಯಸ್ಥರ ಸಹಿ ಇರುವ ಗುರುತು ಪತ್ರವನ್ನು (ಭಾವಚಿತ್ರ ಸಹಿತ) ಕಡ್ಡಾಯವಾಗಿ ಕ್ರೀಡಾಕೂಟದ ಸಮಯದಲ್ಲಿ ಹಾಜರುಪಡಿಸುವುದು. ಒಬ್ಬ ನೌಕರ ಕ್ರೀಡಾಪಟು 01 ಫೀಲ್ಡ್ ಮತ್ತು 02 ಟ್ರ?ಯಾಕ್ ಅಥ-'ವಾ 01 ಟ್ರ?ಯಾಕ್ ಮತ್ತು 02 ಫೀಲ್ಡ್ ಸೇರಿ ಒಟ್ಟು 03 ಆಟಗಳಲ್ಲಿ ಮಾತ್ರ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಯಚೂರು ಇಲ್ಲಿಗೆ ಸಂಪರ್ಕಿಸಬಹುದಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಅತಿಥಿ ಉಪನ್ಯಾಸಕರ ಗೋಳಿಗೆ ಸ್ಪಂದಿಸಿ ಮಾನ್ಯ ಉಚ್ಚ ನ್ಯಾಯಾಲಯದಿಂದ ರಾಜ್ಯ ಸರ್ಕಾರಕ್ಕೆ ನೋಟಿಸ್

ನೈಜ್ಯ ದೆಸೆ ನ್ಯೂಸ್




ಗದಗ: ಕರ್ನಾಟಕದಾದ್ಯಂತ ಎಂ.ಎ., ಎಂ.ಎಸ್‌ಸಿ, ಎಂ.ಕಾಂ., ಇತರೆ ಸ್ನಾತಕೋತ್ತರ ಪದವಿ ಪಡೆದು 2004-2005 ರಿಂದ ವಿವಿಧ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರೆಂದು ಸೇವೆ ಸಲ್ಲಿಸಿತ್ತಿದ್ದರೂ, ಇಂದಿನವರೆಗೆ ಅವ-ರಿಗೆ ತಕ್ಕ ವೇತನ ಕೊಡದೆ ಕಾಯಂಗೊಳಿಸುವ ಪ್ರಸ್ತಾವನೆಯನ್ನು ಮುಂದೂಡುತ್ತ ಅವರ ಜೀವನ ಡೋಲಾಯವಾಗಿಸಿದ್ದು, ಇದನ್ನು ಪರಿಗಣಿಸಿದ ಉಚ್ಚ ನ್ಯಾಯಲಯವು ಸರ್ಕಾರಕ್ಕೆ ಮತ್ತೂ ಕಾಲೇಜು ಶಿಕ್ಷಣ ಆಯುಕ್ತರಿಗೂ ನೋಟೀಸ್ ಆದೇಶಿಸಿದೆ.

ಪ್ರಕರಣದ ವಿವರ:

* ಶ್ರೀ ವಿಜೇಂದ್ರ ಪ್ರಭು ಮತ್ತು 23 ಇತರರು ತಾವೆಲ್ಲರು ವಿವಿಧ ವಿಷಯಗಳಲ್ಲಿ ಸ್ನಾತಕೊತ್ತರ ಪದವೀಧರಿದ್ದು ಅವರುಗಳು ಕಳೆದ ಸರಸಾರಿ 20 ವರ್ಷಗಳಿಂದ ಕರ್ನಾಟಕ ಸರ್ಕಾರದ ವಿವಿಧ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರೆಂದು ಸೇವೆ ಸಲ್ಲಿಸುತ್ತಿದ್ದು ಸೇವೆಯು ಉತ್ತಮವಿದ್ದು, ಅವರ ಮತ್ತು ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿಯಾಗಿದ್ದರೂ ಸಹ ಅವರನ್ನು ಇಲ್ಲಿಯವರೆಗೆ ಕಾಯಂ ಮಾಡದೇ ಮತ್ತು ತಕ್ಕ ವೇತನ ಕರುಣಿಸದೆ ಸರ್ಕಾರವು ಅವರನ್ನು ಕಡೆಗಣಿಸುತ್ತ ಬಂದಿದೆ.

ವಸ್ತುಸ್ಥಿತಿ ಹೀಗಿರಲು ಕರ್ನಾಟಕ ಉಚ್ಚ ನ್ಯಾಯಾಲಯದ ಡಬ್ಲ್ಯೂ.ಎ.ನಂ. 1578/2024 ರಲ್ಲಿ ದಿನಾಂಕ: 08.10.2025 ರಂದು ಆದೇಶ ಹೊರಬಂದು ಇನ್ನು ಮುಂದೆ 2025-26 ಮತ್ತು ಮುಂದಿನ ದಿನಗಳಲ್ಲಿ ಕೇವಲ ಸ್ನಾತಕೊತ್ತರ ಪದವಿ ಹೊಂದಿದ್ದು ಅವರಿಗೆ ಯು.ಜಿ.ಸಿ. ನಿಯಮಾನುಸಾರ ಪಿಹೆಚ್.ಡಿ., ಎನ್.ಇ.ಟಿ./ಕೆ-ಸೆಟ್/ಎಸ್‌ಎಲ್‌ಇಟಿ -ಎಂ.ಫಿಲ್., ವಿದ್ಯಾರ್ಹತೆ ಹೊಂದಿರದಿದ್ದರೆ ಅವರನ್ನು ಅತಿಥಿ ಉಪನ್ಯಾಸಕರೆಂದು ನೇಮಕ ಮಾಡಲು ಅಗಲಾರದೆಂದು ಮತ್ತು ಸದರಿ ಅರ್ಹತೆಗಳು ಇನ್ನು ಮುಂದೆ ಕಡ್ಡಾಯವಾಗಿವೆ ಎಂದು ಅದೇಶವಾಗಿದೆ.

ಆದರೆ, ಈ ಉಚ್ಚ ನ್ಯಾಯಲಾಯದ ಆದೇಶವು ಇನ್ನು ಮುಂದೆ 2025-26 ಮತ್ತು ಮುಂದಿನ ದಿನಗಳ ಹೊಸ ಅತಿಥಿ ಉಪನ್ಯಾಸಕರ ಆಯ್ಕೆಗಳಿಗೆ ಅನುಗುಣವಾಗುತ್ತದೆ ವಿನಹ, ಈಗಾಗಲೇ 20 ವರ್ಷಗಳಿಂದ ಸೇವೆ ಸಲ್ಲಿಸಿರುತ್ತಿರುವ ಅತಿಥಿ ಉಪನ್ಯಾಸಕರಿಗೆ ಇದನ್ನು ಪೂರ್ವಾನ್ವವಾಗಿ ಪರಿಗಣಿಸಲಾಗದು. ಅದು ಅಲ್ಲದೇ ಸರ್ಕಾರವೇ ಸದರಿ ಪ್ರಕರಣದಲ್ಲಿ ವಾದಿಸಿದಂತೆ ಈ ತೀರ್ಪಿನನ್ವಯ ಹೋದರೆ ತಕ್ಕ ಅಭ್ಯರ್ಥಿಗಳು ಸಿಗಲಾರರು ಮತ್ತು ಅರ್ಜಿದಾರರಲ್ಲಿರುವ ಹತ್ತಾರು ವರ್ಷಗಳ ಉಪನ್ಯಾಸಕ ಅನುಭವ ಕಡೆಗಣಿಸಿದಂತೆ ಅಗುತ್ತದೆ. ಇದು ಅಲ್ಲದೆ ಪ್ರಸ್ತುತ ಅರ್ಜಿದಾರರು 20 ವರ್ಷ ಪ್ರಮಾಣಿಕ ಸೇವೆ ಸಲ್ಲಿಸಿ ಅವರು 35 ರಿಂದ 58 ವಯಸ್ಸಿನವರಿದ್ದು ಅವರ ಜೀವನ ಇಂದಿನವರೆಗೆ ಖಾಯಂ ನೌಕ-ರಿಯ ಬೆಳಕು ಕಂಡಿಲ್ಲವೆಂದು ವಾದಿಸಿದರು.

ಅರ್ಜಿದಾರರ ಪರವಾಗಿ ಪವನ್ ಕುಮಾರ್ ಮತ್ತು ಹರ್ಷಿತ ವಕೀಲರು ರಿಟ್ ಅರ್ಜಿ ಸಲ್ಲಿಸಿದ್ದು, ಶ್ರೀ.ಎಸ್.ಪಿ.ಕುಲಕರ್ಣಿ, ಹಿರಿಯ ವಕೀಲರು, ಬೆಂಗಳೂರು ವಾದ ಮಂಡಿಸಿದ್ದು ಕರ್ನಾಟಕ ಉಚ್ಚ ನ್ಯಾಯಲಯದ ಮಾನ್ಯ ನ್ಯಾಯಮೂರ್ತಿಗಳಾದ ಶ್ರೀ.ಅಶೋಕ ಕಿಣಗಿ, ಪರಿಸ್ಥಿತಿಯನ್ನು ಪರಿಗಣಿಸಿ ಕರ್ನಾಟಕ ಸರ್ಕಾರಕ್ಕೆ, ಸರ್ಕಾರಿ ವಕೀಲರ ಮುಖಾಂತರ ನೋಟಿಸ್ ಜಾರಿಗೆ ಅದೇಶಿಸಿದ್ದಾರೆ. ಸದರಿ ಪ್ರಕರಣವು 23.01.2026 ರಂದು ಉಚ್ಚ ನ್ಯಾಯಲಯದಲ್ಲಿ ವಿಚಾರಣೆಗೆ ಬರಲಿದೆ. ಸೇವಾ ಜೀವನದಲ್ಲಿ ಪೂರ್ತಿ ನೊಂದು ತತ್ತರಿಸಿದ ಕರ್ನಾಟಕದಂದ್ಯಂತ ಅತಿಥಿ ಉಪನ್ಯಾಸಕರು ಹೊಸ ಬೆಳಕಿಗಾಗಿ ಕಾದು ನೋಡಬೇಕಾಗಿದೆ ಎಂದು ಕರ್ನಾಟಕ ರಾಜ್ಯ ಅತಿಥಿ ಉಪನ್ಯಾಸಕರ ಸಂಘದ ??. ಹನಮಂತಗೌಡ ಕಲ್ಮನಿಯವರು ತಮ್ಮ ಆಶಾಭಾವನೆಯನ್ನು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಭೀಮಾ ಕೋರೆಗಾಂವ್ ವಿಜಯೋತ್ಸವ ಡಿ.31 ರಂದು ಪಂಜಿನ ಮೆರವಣಿಗೆ: ಪ್ರವೀಣ್ ಧುಮತಿ.

ನೈಜ್ಯ ದೆಸೆ ನ್ಯೂಸ್



ಭೀಮಾ ಕೋರೆಗಾಂವ್ 208ನೇ ವಿಜಯೋತ್ಸವ ಹಿನ್ನೆಲೆ ಭೀಮ್ ಆರ್ಮಿ (ಭಾರತ ಏಕತಾ ಮಿಷನ್) ತಾಲೂಕು ಸಮಿತಿ ವತಿಯಿಂದ ಡಿಸೆಂಬರ್ 31ರಂದು ಪಂಜಿನ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಸಮಿತಿ ಅಧ್ಯಕ್ಷ ಪ್ರವೀಣ್ ಧುಮತಿ ಹೇಳಿದರು.

ಶನಿವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, 28 ಸಾವಿರ ಸೈನಿಕರನ್ನು ಕೇವಲ 500 ಜನ ಸೈನಿಕರು ಸೇರಿಕೊಂಡು ಸೋಲಿಸಿದ ಕದನ ಭೀಮಾ ಕೋರೆಗಾಂವ್ ಆಗಿದೆ. ಪೇಶ್ವೆಗಳ ಆಡಳಿತದಲ್ಲಿದ್ದ ಜಾತಿ, ಅಸ್ಪೃಶ್ಯತೆ, ಮೇಲು-ಕೀಳುಗಳ ವಿರುದ್ಧ ಸೆಟೆದು ನಿಂತು ಮಾನವೀಯ ಮೌಲ್ಯಗಳನ್ನು ಪಡೆದುಕೊಳ್ಳಲು ಹಂಬಲಿಸಿದ ಮಹರ್ ಸೈನಿಕರ ಧೈರ್ಯ, ಸಾಹಸ, ಕೆಚ್ಚೆದೆಯ ಹೋರಾಟಕ್ಕೆ ಇದು ಸಾಕ್ಷಿಯಾಗಿದೆ.

ಅಷ್ಟೇ ಅಲ್ಲದೇ ಶೋಷಿತರು, ಮೇಲ್ಜಾತಿ ಶೋಷಕರ ಶೋಷಣೆಯ ನಡವಳಿಕೆ ವಿರುದ್ಧ ಯುದ್ಧವನ್ನು ಘೋಷಿಸಿ, ಗೆಲುವು ಸಾಧಿಸಿದಂತ ದಿನವೇ ಭೀಮಾ ಕೋರೆಗಾಂವ್ ವಿಜಯೋತ್ಸವವಾಗಿದೆ. ಭೀಮಾ ತೀರದಲ್ಲಿ ಕಾಳಗ ನಡೆದಿದ್ದರಿಂದ ಇತಿಹಾಸದಲ್ಲಿ ಭೀಮಾ ಕೋರೇಗಾಂವ್ ಯುದ್ಧವೆಂದೇ ಪ್ರಸಿದ್ಧಿ ಪಡೆದಿದೆ. ನಗರದ ಎಪಿಎಂಸಿಯಿಂದ ತಾಲೂಕು ಪಂಚಾಯಿತಿ ಆವರಣದಲ್ಲಿರುವ ಅಂಬೇಡ್ಕರ್ ಪುತ್ಥಳಿವರೆಗೆ ಭೀಮ್ ಆರ್ಮಿ ಕಾರ್ಯಕರ್ತರು ಸೇರಿದಂತೆ ಮುಖಂಡರಿಂದ ಪಂಜಿನ ಮೆರವಣಿಗೆ ನಡೆಯಲಿದೆ. ನಂತರ ಮಹಾತ್ಮಗಾಂಧಿ ವೃತ್ತದಲ್ಲಿ ಕ್ಯಾಲೆಂಡರ್ ಬಿಡುಗಡೆ ಮಾಡಲಾಗುವುದು.

ಈ ವಿಜಯೋತ್ಸವದಲ್ಲಿ ವಿದ್ಯಾರ್ಥಿ ಯುವಜನರು, ವಿವಿಧ ಜನಪರ ಸಂಘಟನೆಗಳ ಮುಖಂಡರು, ದಲಿತ ಸಂಘಟನೆಗಳ ಮುಖಂಡರು ಭಾಗವಹಿಸಲು ಪ್ರಮೀಣ್‌ಕುಮಾರ ಧುಮತಿ ಮನವಿ ಮಾಡಿದರು. ಈ ಸುದ್ದಿಗೋಷ್ಠಿಯಲ್ಲಿ ಉಮೇಶ ಸುಕಾಲಪೇಟೆ, ಪರಶುರಾಮ, ಬೀರಪ್ಪ, ಪ್ರದೀಪ್, ವೀರಭದ್ರಯ್ಯ ಇದ್ದರು.

# ಜಿಲ್ಲಾ ಮಟ್ಟದ ಬಾನುಲಿ ಕವಿಗೋಷ್ಠಿ

ನೈಜ್ಯ ದೆಸೆ ನ್ಯೂಸ್



ರಾಯಚೂರು: 'ಗುಬ್ಬಚ್ಚಿ ಗೂಡು ಹೆಣೆಯುವಂತೆ ನವಿರತೆ, ಕಟ್ಟುವ ಕಲೆ ಸಿದ್ದಿಸಿದ ಕವಿಗೆ ಕಾವ್ಯ ಒಲಿಯುತ್ತದೆ' ಎಂದು ಕವಿ ರಮೇಶ ಅರೋಲಿ ಹೇಳಿದರು. ನಗರದ ಆಕಾಶವಾಣಿ ಕೇಂದ್ರದಲ್ಲಿ ಬುಧವಾರ ನಡೆದ ಜಿಲ್ಲಾಮಟ್ಟದ ಬಾನುಲಿ ಕವಿಗೋಷ್ಠಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು,'ಕವಿತೆ ಏಕಾಂತದ ಪಿಸುಮಾತು ಮತ್ತು ಸಮುದಾಯಿಕವಾಗಿ ಹುಟ್ಟುವ ಗಾನ, ಎಲ್ಲಾ ಅಭಿವ್ಯಕ್ತಿಯ ತುತ್ತತುದಿ ಅದು ಕಾವ್ಯ ಪ್ರಕಾರವಾಗಿದೆ. ಭಿನ್ನ ಅಭಿವ್ಯಕ್ತಿಯ ಪ್ರಕಾರಗಳು ಇದ್ದರೂ ಸಹಿತ ಕವಿತೆಗೆ ಪ್ರಾಮುಖ್ಯತೆ ಸಿಕ್ಕಿದೆ' ಎಂದರು.

'ಪ್ರಪಂಚದ ಶ್ರೇಷ್ಠ ಕೃತಿಕಾರರನ್ನು ನೋಡಿದಾಗ, ವಿಲಿಯಂ ಷೇಕ್ಸ್ಪಿಯರ್‌ನಂಥ ಶ್ರೇಷ್ಠ ಕವಿಗಳು ಗಡಿ ಎಲ್ಲೆಗಳನ್ನು ಮೀರಿ ಬೆಳೆದು ನಮಗೆ ತಲುಪಿದ್ದು, ಮತ್ತು ಮನುಷ್ಯನ ಮೂಲಭೂತ ಗುಣ, ಮನುಷ್ಯನ ಸ್ವಾಭಾವಿಕ ನಡೆಗಳು ಆತನ ಆಲೋಚನೆ ಮತ್ತು ಮಹತ್ವಾಕಾಂಕ್ಷೆಗಳ ಬಗ್ಗೆ ಬರೆದ ಕಾರಣಕ್ಕೆ ಗಡಿ ಎಲ್ಲಿಗಳನ್ನು ಮೀರಿ ಒಬ್ಬ ಮಹಾಕವಿ ತಲುಪುತ್ತಾನೆ. ಅದು ಕವಿತೆಗೆ ಇರುವಂತಹ ಶಕ್ತಿ ಎಂದರು ಹೇಳಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಧಾರವಾಡದ ಸಾಹಿತಿ ಟಿ. ಎಸ್. ಗೊರವರ ಮತ್ತು ಕಥ-'ಗಾರ ಅಮರೇಶ ಗಿಣಿವಾರ ಮಾತನಾಡಿದರು. ಆಕಾಶವಾಣಿ ಕಾರ್ಯಕ್ರಮ ಮುಖ್ಯಸ್ಥ ವೆಂಕಟೇಶ ಬೇವಿನಬೆಂಚಿ ಅಧ್ಯಕ್ಷತೆ ವಹಿಸಿದ್ದರು.

ಕವಿಗೋಷ್ಠಿಯಲ್ಲಿ ಪಾಲ್ಗೊಂಡ 15 ಕವಿಗಳು ಕವಿತೆ ವಾಚಿಸಿದರು. ಆಕಾಶವಾಣಿ ತಾಂತ್ರಿಕ ವಿಭಾಗದ ಮುಖ್ಯಸ್ಥ ಅರವಿಂದ, ಸಿಬ್ಬಂದಿ ನಾಗಮಣಿ, ಅರಸು, ಆಂಜನೇಯ, ಶ್ರೀನಿವಾಸ ಕುಲ್ಕರ್ಣಿ, ನಾಗರತ್ನ, ನರೇಂದ್ರ ಮತ್ತಿತರರು ಉಪಸ್ಥಿತರಿದ್ದರು. ವಿಜಯಶ್ರೀ ನಿರೂಪಿಸಿದರು. ರಮಾ ಕುಲಕರ್ಣಿ ಪ್ರಾರ್ಥಿಸಿದರು. ಪರಮೇಶ್ವರಪ್ಪ ಗೋಪಿಶೆಟ್ಟಿ ಸ್ವಾಗತಿಸಿದರು. ವೀರೇಶ್ ವಂದಿಸಿದರು.

## ಸಿರವಾರ: ಪ.ಪಂ.ಸದಸ್ಯರಿಂದ ನೂತನವಾಗಿ ಆಯ್ಕೆಗೊಂಡ ಪತ್ರಕರ್ತರಿಗೆ ಸನ್ಮಾನ




ನೈಜ್ಯ ದೆಸೆ ನ್ಯೂಸ್

ಸಿರವಾರ,: ಪಟ್ಟಣ ಪಂಚಾಯತಿಯ 14ನೇ ವಾರ್ಡಿನ ಸದಸ್ಯರಾದ ಅಜೀತಕುಮಾರ್ ಹೊನ್ನಟಗಿ ಹಾಗೂ ಅವರ ಸಹೋದರ ಅನೀಲ್ ಕುಮಾರ್ ಹೊನ್ನಟಗಿ ವಕೀಲರು ಅವರಿಂದ ಇತ್ತೀಚೆಗೆ ಜಿಲ್ಲಾ ಹಾಗೂ ತಾಲೂಕು ಪತ್ರಕರ್ತರ ಸಂಘಕ್ಕೆ ನೂತನವಾಗಿ ಆಯ್ಕೆಗೊಂಡ ಪತ್ರಕರ್ತರಿಗೆ ಶುಕ್ರವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸನ್ಮಾನಿಸಿ ಅಭಿನಂದನೆ ಸಲ್ಲಿಸಿದರು.

ರಾಯಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಚುನಾವಣೆಯಲ್ಲಿ ಜಿಲ್ಲಾ ಕಾರ್ಯಕಾರಣಿ ಸಮಿತಿ ಸದಸ್ಯರಾಗಿ ಗೆಲುವುವಸಾಧಿಸಿದ ಸಿರವಾರ ತಾಲೂಕು ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷರೂ ಆದ ಎಂ.ಗುಂಡಪ್ಪ, ತಾಯಪ್ಪ ಬಿ. ಹೊಸೂರು, ಸಿರವಾರ ತಾಲೂಕು ಘಟಕದ ನೂತನ ಅಧ್ಯಕ್ಷರಾಗಿ ಆಯ್ಕೆಗೊಂಡ ಹನುಮೇಶ, ಪ್ರಧಾನ ಕಾರ್ಯದರ್ಶಿ ನಾಗರಾಜ ಕರಿಬಿಲ್ಕರ್, ಉಪಾಧ್ಯಕ್ಷ ಮಹ್ಮದ್ ಸಾಬ, ಖಜಾಂಚಿ ಮೌನೇಶ ಪಾಟೀಲ್, ಕಾರ್ಯದರ್ಶಿ ಮಹೇಶ ಪಾಟೀಲ್, ಕಾರ್ಯಕಾರಿ ಸಮಿತಿ ಸದಸ್ಯರಾದ ವಿಜಯಕುಮಾರ್ ಎಸ್, ಲಕ್ಷ್ಮಣ ಪೋತಾಪೂರು, ಮಾನ್ವಿ ತಾಲೂಕು ಘಟಕದ ಅಧ್ಯಕ್ಷರಾದ ಅಶೋಕ ತಡಕಲ್, ಸದಸ್ಯರಾದ ಅಜಯಕುಮಾರ್ ಸೇರಿದಂತೆ ಎಲ್ಲಾ ನೂತನ ಪದಾಧಿಕಾರಿಗಳಿಗೆ ಸನ್ಮಾನಿಸಲಾಯಿತು.

ನಂತರ ಪಟ್ಟಣ ಪಂಚಾಯತ್ ಸದಸ್ಯ ಅಜಿತ್ ಕುಮಾರ ಹೊನ್ನಟಗಿ ಅವರು ಮಾತನಾಡಿ, "ಸಮಾಜದ ಧ್ವನಿಯಾಗಿ ಕಾರ್ಯನಿರ್ವಹಿಸುವ ಪತ್ರಕರ್ತರ ಸೇವೆ ಅಮೂಲ್ಯ. ಅವರ ಕಾರ್ಯಕ್ಕೆ ಗೌರವ ಸಲ್ಲಿಸುವುದು ನಮ್ಮ ಕರ್ತವ್ಯ" ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ (ಕಸಾಪ) ಮಾಜಿ ಅಧ್ಯಕ್ಷ ಮೂಕಪ್ಪ ಕಟ್ಟಿಮನಿ, ಮಾರೇಪ್ಪ, ಚನ್ನಪ್ಪ ಬೂದಿನಾಳ, ನದೀಮ್ ಪಾಷ, ಜಯರಾಜ್, ಪಾರ್ಥ, ಮೇಷಕ್ ದೊಡ್ಡನೆ, ಅಮರೇಶ ಚೌದರಿ, ಸುರೇಶ್ ಕಾತರಕಿ, ಈರೇಶ್ ಹರವಿ, ಅಮರೇಶ ಹಿರೆಬಾದರದಿನ್ನಿ, ನಿರಂಜನ, ಕನ್ಯಾಕುಮಾರ ಹೊನ್ನಟಗಿ, ಮುತ್ತಣ್ಣ ಚಾಗಬಾವಿ, ಹುಲಿಗೆಪ್ಪ ಯಾಕ್ಲಾಸಪುರ, ವಿಜಯ ಪ್ರಕಾಶ್, ಮಲ್ಲಿಕಾರ್ಜುನ ಅತ್ತನೂರ್, ವೀರೇಶ್ ಗಣದಿನ್ನಿ, ವಿರುಪಾಕ್ಷಿ ಹಳ್ಳಿಹೊಸೂರು, ಪ್ರಭಾಕರ, ಸುಂದರ ರಾಜ್, ವೀರೇಶ್ ಹರವಿ, ವೀರೇಶ್ ಗಣದಿನ್ನಿ, ವಿಜಯ ಪ್ರಕಾಶ್, ವೀರೇಶ್ ಗಣದಿನ್ನಿ, ವೀರೇಶ್ ಗಣದಿನ್ನಿ, ವೀರೇಶ್ ಗಣದಿನ್ನಿ, ವಿರುಪಾಕ್ಷಿ ಹಳ್ಳಿಹೊಸೂರು, ಪ್ರಭಾಕರ, ಸುಂದರ ರಾಜ್ ಸೇರಿದಂತೆ ಹಲವರು ಉಪಸ್ಥಿತರಿದ್ದರು

## ಮಾನ್ವಿ: ಸರ್ಕಾರಿ ಶಾಲೆಯಲ್ಲಿ ತಹಸೀಲ್ದಾರ್ ರಿಂದ ಪಾಠ; ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬಿದ ಭೀಮರಾಯ ರಾಮ ಸಮುದ್ರ

ನೈಜ್ಯ ದೆಸೆ ನ್ಯೂಸ್





ಮಾನ್ವಿ: ಪಟ್ಟಣದ ಬಾಲಕಿಯರ ಸರ್ಕಾರಿ ಪ್ರೌಢ ಶಾಲೆಯಲ್ಲಿ ಶನಿವಾರ ವಿಶೇಷ ಶೈಕ್ಷಣಿಕ ಚಟುವಟಿಕೆಯೊಂದು ಜರುಗಿತು. ಮಾನ್ವಿ ತಹಸೀಲ್ದಾರ್ ಆದ ಭೀಮರಾಯ ರಾಮು ಸಮುದ್ರ ಅವರು ಶಾಲಾ ಭೇಟಿ ನೀಡಿ, ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುವ ಮೂಲಕ ಗಮನ ಸೆಳೆದರು.

ತಹಸೀಲ್ದಾರ್ ಅವರು ಶಿಕ್ಷಕರಾಗಿ ವಿದ್ಯಾರ್ಥಿಗಳಿಗೆ ಬೋಧನೆ ಮಾಡಿದರು. ಹತ್ತನೇ ತರಗತಿಯ ಕನ್ನಡ ವಿಷಯದ ಪ್ರಮುಖ ಪದ್ಯವಾದ 'ಕೆಮ್ಮನೆ ಮಿಸೆವೊತ್ತೆನೇ' ಭಾಗವನ್ನು ವಿದ್ಯಾರ್ಥಿಗಳಿಗೆ ಬಹಳ ಆಸಕ್ತಿದಾಯಕವಾಗಿ ವಿವರಿಸಿದರು. ಪದ್ಯದ ಸಾರಾಂಶ ಮತ್ತು ಅದರ ಹಿಂದಿನ ಆಶಯವನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರು.

ನಂತರ ವಿದ್ಯಾರ್ಥಿಗಳೊಂದಿಗೆ ಪರೀಕ್ಷಾ ಸಿದ್ಧತೆಯ ಬಗ್ಗೆ ಚರ್ಚಿಸಿದ ಅವರು, ಪರೀಕ್ಷೆಯ ಭಯವನ್ನು ಬಿಟ್ಟು ಆತ್ಮವಿಶ್ವಾಸದಿಂದ ಸಿದ್ಧರಾಗಬೇಕು ಮತ್ತು ಅಭ್ಯಾಸದ ಅವಧಿಯಲ್ಲಿ ಸಮಯದ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಅಮೂಲ್ಯವಾದ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಶಾಲೆಯ ಉಪ ಪ್ರಾಂಶುಪಾಲರಾದ ಸುಧಾಕರ ಸಂಜೀವ, ರೇಖಾದೇವಿ, ಬಂಡೆಮ್ಮ, ಅಶೋಕ್ ಕುಮಾರ್ ಮಳ್ಳಿ,ಮಂಜುಳಾ ಹಿರೇಮಠ, ರಜನಿ, ಶೇಖ್ ಹುಸೇನ್, ಚನ್ನಬಸವರಾಜ, ಪ್ರಮೋದ ಕುಮಾರ, ಶ್ರೀಮತಿ ಕಟ್ಟಿ, ನುಜಹತ್ ಫಾತಿಮಾ, ಶರಣಮ್ಮ, ಜಯಭೀಮ ಭಾವಿಕಟ್ಟಿ, ಈರಾಮಣಿ,ಶರತ್ ಕುಮಾರ್, ರಾಜಶೇಖರ. ಎಚ್, ರೇಣುಕಾ ಇದ್ದರು.

## ನೇಮಕಾತಿ ಪ್ರಕಟಣೆ

ಸಂಸ್ಥೆಯ ಹೆಸರು: ರಾಷ್ಟ್ರೀಯ ವಿಧಿವಿಜ್ಞಾನ ವಿಶ್ವವಿದ್ಯಾಲಯ (NFSU) ಹುದ್ದೆಗಳ ಸಂಖ್ಯೆ: 61 ಉದ್ಯೋಗ ಸ್ಥಳ: ಅಖಿಲ ಭಾರತ ಹುದ್ದೆ ಹೆಸರು: ಪ್ರಯೋಗಾಲಯ ಸಹಾಯಕ ಸಂಬಳ: NFSU ಮಾನದಂಡಗಳ ಪ್ರಕಾರ ಹುದ್ದೆಗಳ ಸಂಖ್ಯೆ ಹಿರಿಯ ವೈಜ್ಞಾನಿಕ ಅಧಿಕಾರಿ 2 ಕಿರಿಯ ವೈಜ್ಞಾನಿಕ ಅಧಿಕಾರಿ 3 ಹಿರಿಯ ವೈಜ್ಞಾನಿಕ ಸಹಾಯಕ 1 ಪ್ರಯೋಗಾಲಯ ಸಹಾಯಕ 24 ಉಪ ನೋಂದಣಿ ಅಧಿಕಾರಿ 7 ಸಹಾಯಕ ನೋಂದಣಿ ಅಧಿಕಾರಿ 9 ಉಪ ಎಂಜಿನಿಯರ್ (ಸಿವಿಲ್) 1 ಸಹಾಯಕ ಎಂಜಿನಿಓಈ–ಖಗ ನೇಮಕಾತಿ 2026–61 ಪ್ರಯೋಗಾಲಯ ಸಹಾಯಕ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಓಈಖಗ ನೇಮಕಾತಿ 2025: 61 ಪ್ರಯೋಗಾಲಯ ಸಹಾಯಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ರಾಷ್ಟ್ರೀಯ ವಿಧಿವಿಜ್ಞಾನ ವಿಶ್ವವಿದ್ಯಾಲಯವು ಡಿಸೆಂಬರ್ 2025 ರ NFSU ಅಧಿಕೃತ ಅಧಿಸೂಚನೆಯ ಮೂಲಕ ಪ್ರಯೋಗಾಲಯ ಸಹಾಯಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅಖಿಲ ಭಾರತ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 18–ಜನವರಿ–2026 ರಂದು ಅಥ–ವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುಯರ್ (ಸಿವಿಲ್) 3 ಸಹಾಯಕ ಎಂಜಿನಿಯರ್ (ಎಲೆಕ್ಟ್ರಿಕಲ್) 2 ಸಂಖ್ಯಾಶಾಸ್ತ್ರೀಯ ಸಹಾಯಕ 5 ಸಹಾಯಕ ಗ್ರಂಥಪಾಲಕ 1 ಗ್ರಂಥಾಲಯ ಸಹಾಯಕ 3 Official Website: nfsu.ac.in ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 18–12–2025 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 18–ಜನವರಿ–2026

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದೇ ಕುರಾನ್ ಪ್ರವಚನದ ಸಾರ –ಶಾಸಕ ವಿಜಯಾನಂದ ಕಾಶಪ್ಪನವರ ಅಭಿಮತ

ನೈಜ್ಯ ದೆಸೆ ನ್ಯೂಸ್

**ಇಲಕಲ್ಲ: ಇಂದು ದೇಶದಲ್ಲಿ ಮನುಜರು ಮಾನವೀಯತೆಯ ಮೌಲ್ಯಗಳನ್ನು ಮರೆತಿರುವುದರಿಂದ ನಾನಾ ರೀತಿಯ ಸಮಸ್ಯೆಗಳು ಈ ಸಮಾಜದಲ್ಲಿ ಎದುರಾಗುತ್ತಿವೆ. ಆದುದರಿಂದ ಇಂತಹ ಪ್ರವಚನಗಳು ಮಾನವೀಯ ಮೌಲ್ಯಗಳನ್ನು ಕಲಿಸುತ್ತವೆ ಎಂದು ಶಾಸಕ ಹಾಗೂ ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿರುವ ಶ್ರೀ ಡಾ. ವಿಜಯಾನಂದ ಎಸ್ ಕಾಶಪ್ಪನವರ ಅಭಿಪ್ರಾಯ ವ್ಯಕ್ತಪಡಿಸಿದರು.**

ನಗರದ ವಿಜಯ ಮಹಾಂತೇಶ್ ಅನುಭವ ಮಂಟಪದಲ್ಲಿ ಜಮಾಅತೆ ಇಸ್ಲಾಮೀ ಹಿಂದ ಇಲಕಲ್ ವತಿಯಿಂದ ಕೆಡುಕು ಮುಕ್ತ ಸಮಾಜ ಎಂಬ ವಿಷಯದ ಮೇಲೆ ನೆರವೇರಿದ ಕನ್ನಡದಲ್ಲಿ ಸಾರ್ವಜನಿಕ ಕುರಾನ್ ಪ್ರವಚನವನದಲ್ಲಿ ಮುಖ್ಯ ಅತಿಥಿ ಸ್ಥಾನವನ್ನು ಅಲಂಕರಿಸಿ ಮಾತನಾಡಿದ ಅವರು ಎಲ್ಲಾ ಸಮುದಾಯದವರು ಕೂಡ ಇಂತಹ ಅರಿವು ಮೂಡಿಸುವ , ಕೆಡುಕುಗಳನ್ನು ನಿರ್ಮೂಲನೆ ಮಾಡುವಂತಹ ಪ್ರವಚನಗಳನ್ನು ಏರ್ಪಾಡು ಮಾಡುವುದು ಉತ್ತಮ.

ಈ ದೇಶದಲ್ಲಿ ಬಹಳಷ್ಟು ಸಂಘಟನೆಗಳು ಈ ದೇಶವನ್ನು ಒಡೆದು ಹಾಕುವ ಕೆಲಸ ಮಾಡುತ್ತಿವೆ ಅಂತಹವರ ವಿರುದ್ಧ ಎಲ್ಲಾ ಸಜ್ಜನರು ಧ್ವನಿಗೂಡಿಸುವ ಅವಶ್ಯಕತೆ ಇದೆ ಎಂದರು. ನುಡಿದಂತೆ ನಡೆ ಇಲ್ಲದಿದ್ದರೆ ಇದೇ ಜೀವನ ಕಡೆ ಎಂಬ ಬಸವಣ್ಣನವರ ಮಾತನ್ನು ನೆನಪಿಸುತ್ತಾ ಕೇವಲ ಭಾಷಣ ಮತ್ತು ಪ್ರವಚನಗಳಿಗೆ ಸೀಮಿತವಾಗದೆ ನಮ್ಮ ಜೀವನದಲ್ಲಿಯೂ ಕೂಡ ಇದನ್ನು ಅಳವಳಿಸಿಕೊಂಡು ಮುಂದೆ ಸಾಗಬೇಕಾಗಿದ. ನಮ್ಮ ದೇಶ ಜಾತ್ಯತೀತತೆಯ ದೇಶ ಎಂಬ ಜಂಬ ಕೊಚ್ಚಿಕೊಳ್ಳದೆ ಹದಗೆಟ್ಟಿರುವ ಜಾತ್ಯಾತೀತತೆಯ ಕೆಳಭಾಗದಲ್ಲಿ ನಾವು ಕೆಲಸ ಮಾಡುವ ಅವಶ್ಯಕತೆ ಇದೆ ಎಂದರು. ಇದಕ್ಕೂ ಮುನ್ನ ಪ್ರಾಸ್ತಾವಿಕವಾಗಿ ಜನಾಬ ಲಾಲ ಹುಸೇನ್ ಕಂದಗಲ್ ರವರು ಮಾತನಾಡಿ ಸುಮಾರು 50 ವರ್ಷಗಳಿಂದ ನಗರದಲ್ಲಿ ತಮಾಅತೆ ಇಸ್ಲಾಮೀ ಹಿಂದ್ ತನ್ನ ಸೇವೆಯನ್ನು ತನ್ನ ಕರ್ತವ್ಯವೆಂದು ತಿಳಿದು ಹಗಲಿರುಳು ಶ್ರಮಿಸುತ್ತಾ ಬಂದಿದೆ , ದೇಶದಲ್ಲಿ ನೈಜ್ಯ ಮೌಲ್ಯದೆಡೆಗೆ ಸುಮಾರು 80 ವರ್ಷಗಳಿಂದ ಹಲವಾರು ವಿಭಾಗಗಳೊಂದಿಗೆ ವ್ಯವಸ್ಥಿತ ರೀತಿಯಲ್ಲಿ ಸಮಾಜ ಸುಧಾರಣಾ ಕಾರ್ಯಗಳನ್ನು ಮಾಡುತ್ತಾ ಬಂದಿದೆ . ಇದೇ ರೀತಿಯಾಗಿ ಮುಂದುವರೆದು ಮಾತನಾಡಿದ ಅವರು ಪ್ರೀತಿ ವಿಶ್ವಾಸದಿಂದ ಈ ಸಮಾಜ ಮುನ್ನಡೆಯಲಿ ಎಂದು ಈ ಪ್ರವಚನದ ಮೂಲ ಉದ್ದೇಶವಾಗಿದೆ , ಇದು ಕೇವಲ ಮುಸ್ಲಿಮರ ಕಾರ್ಯಕ್ರಮವಲ್ಲದೆ ಇದು ಇಳಕಲ್ ನಗರದ ಕಾರ್ಯಕ್ರಮವಾಗಿದೆ ಎಂದರು.

ಮುಖ್ಯ ಪ್ರವಚನಕಾರರಾದ ನಾಡಿನ ಖ್ಯಾತ ವಾಗ್ಮಿಗಳು ಹಾಗೂ ಶಾಂತಿ ಪ್ರಕಾಶನದ ವ್ಯವಸ್ಥಾಪಕರಾಗಿರುವ ಜನಾಬ ಮುಹಮ್ಮದ್ ಕುಂಞಿ ರವರು ಕೆಡಕು ಮುಕ್ತ ಸಮಾಜ ಎಂಬ ವಿಷಯದ ತಮ್ಮ ಪ್ರವಚನದಲ್ಲಿ ಅಜ್ಞಾನ ಎಂಬುದು ಕತ್ತಲು,



ಈ ಅಜ್ಞಾನದ ವಿರುದ್ಧ ಧರ್ಮಗಳ ಬೆಳಕು ಹಾಗೂ ಹೆಚ್ಚು ಹೆಚ್ಚು ಅರಿವು ಮೂಡಿಸುವ ಪ್ರಯತ್ನಗಳನ್ನು ನಮ್ಮದಾಗಿಸಬೇಕು ಎಂದರು.

ಮನುಷ್ಯರ ಮಧ್ಯೆ ನಿರಂತರ ಅಂತರ ಹೆಚ್ಚಾಗುತ್ತಿದೆ ಮನುಷ್ಯನ ಸುತ್ತ ಇಂದು ಭಯದ ವಾತಾವರಣ ಸೃಷ್ಟಿಯಾಗಿದೆ ಇದೇ ವರ್ಷದಲ್ಲಿ ದೇಶದ 2079 ವಿದ್ಯಾರ್ಥಿಗಳು ಭಯದಿಂದ ಆತ್ಮಹತ್ಯೆ ಮಾಡಿಕೊಂಡ ಪ್ರಕರಣವನ್ನು ನೆನಪಿಸುತ್ತಾ ಮಾತನಾಡಿದ ಅವರು ಪ್ರವಾದಿಗಳು ಈ ಜಗತ್ತಿನಲ್ಲಿ ಹೆದರಿಸಲು ಬಂದವರಲ್ಲ ಬದಲಾಗಿ ಪ್ರೀತಿಯಿಂದ ಹಾಗೂ ನೆಮ್ಮದಿಯೊಂದಿಗೆ ನಿರ್ಭಯವಾಗಿ ಬದುಕುವ ದಾರಿಯನ್ನು ಸಮಾಜಕ್ಕೆ ತೋರಿಸಲು ಬಂದವರು , ದೇವರಿಂದ ಜನರ ಮಾರ್ಗದರ್ಶನಕ್ಕಾಗಿ ಕುರಾನ್ ಅವತೀರ್ಣಗೊಂಡಿದೆ ಇದೇ ಕುರಾನಿನ 13 ಕಡೆಯಲ್ಲಿ ಭಯವಿಲ್ಲದೆ ಬದುಕುವ ದಾರಿ ತೋರಿಸಿ , ಜನರನ್ನು ಭಯದಿಂದ ಹೊರ ತೆಗೆದು ಎಲ್ಲಾ ಕೆಡುಕುಗಳ ವಿರುದ್ಧ ಬದುಕುವ ಉದ್ದೇಶ ತೋರಿಸಿ ಕೊಡುವ ಹಲವಾರು ನಿರ್ದಶನಗಳಿವೆ . ಮನುಷ್ಯರನ್ನು ಬೇರ್ಪಡಿಸುವ ಒಂದು ಅಂಶವು ಕುರಾನಿನಲ್ಲಿ ಸಿಗುವುದಿಲ್ಲ ಎಲ್ಲಾ ಮನುಷ್ಯರ ಹೃದಯಗಳನ್ನು ಜೋಡಿಸುವ ಗ್ರಂಥ ಇದಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಒಬ್ಬ ಮನುಷ್ಯನನ್ನು ಕೊಂದರೆ ಇಡೀ ಮಾನವ ಕುಲವನ್ನೇ ಕೊಂದಹಾಗೆ ಎಂದು ಎಚ್ಚರಿಸುವ ತತ್ವಗಳು ಕುರಾನಿನಲ್ಲಿ ಸಿಗುತ್ತವೆ ಒಂದು ಜೀವವನ್ನು ಉಳಿಸಿದರೆ ಇಡೀ ಮಾನವ ಕುಲವನ್ನೇ ಉಳಿಸಿದಂತೆ ಎಂದು ಈ ಗ್ರಂಥ ಸಾರುತ್ತದೆ. ಸಹೋದರ ಸಹೋದರರ ಮಧ್ಯೆ ಭಿನ್ನಾಭಿಪ್ರಾಯಗಳು ಇರಕೂಡದು ನಿಮ್ಮ ಸಹೋದರರ ಮುಖವನ್ನು ನೋಡಿದಾಗ ನಿಮ್ಮ ಮುಖದಲ್ಲಿ ಹರ್ಷೋದ್ಗಾರವನ್ನು ತರಬೇಕು , ಈ ಕಾಲ ಚಿನ್ನಕ್ಕೂ ತುಕ್ಕು ಹಿಡಿಯುವ ಕಾಲ, ಎಲ್ಲರೂ ಕೆಟ್ಟು ಹೋಗುತ್ತಿರುವ ಕಾಲ. ಪುರುಷರು ಮತ್ತು ಮಹಿಳೆಯರು ಎನ್ನದೆ ಯುವಕರು ಮತ್ತು ವೃದ್ಧರು ಎನ್ನದೆ ಎಲ್ಲರೂ ಕೆಡುಕುಗಳಲ್ಲಿ ತಲ್ಲೀನ ರಾಗಿರುವ ಕಾಲ ಇಂತಹ ಕಾಲದಲ್ಲಿ ಮನುಷ್ಯರ ಮನಸ್ಸುಗಳು ಮಾಲಿನ್ಯವಾಗಿವೆ . ಮನುಷ್ಯ ಮನುಷರ ಮಧ್ಯ ಪೈಶಾಚಿಕ ಕೃತ್ಯಗಳು ನಡೆಸುವವರು ಮನುಷ್ಯರಲ್ಲ ಬದಲಾಗಿ ಪಿಶಾಚಿಗಳು ಎಂದರು. ಕಲ್ಚರಲ್ ಲಿಬರಲಿಸಂ ನ ಕಾಲ ಇದು ಎಂದು ಮಾತನಾಡಿದ ಅವರು ಹಿಂದೆ ಈ ಸಮಾಜ ಕೆಟ್ಟವರನ್ನು ಸಮಾಜದ ಆಚೆ ಇಡುತ್ತಿತ್ತು ಆದರೆ ಇಂದು ಇದೇ ಕೆಟ್ಟ ಜನರನ್ನು ನಮ್ಮ ನಾಯಕರನ್ನಾಗಿ ಮಾಡುತ್ತಿರುವಂತಹದ್ದು ಬಹಳ ದುಃಖದ ಸಂಗತಿ. ಸಮಸ್ಯೆಗಳನ್ನು ಸೃಷ್ಟಿಸುತ್ತಿರುವವರು ಇಂದು ನಾಯಕರುಗಳಾಗಿ ಮಾರ್ಪಡುತ್ತಿದ್ದಾರೆ, ಅತ್ಯಾಚಾರಿಗಳನ್ನು ಸ್ವಾಗತಿಸುವ ಸಮಾಜವನ್ನು ನಾವು ಕಣ್ಣಾರೆ ಕಂಡಿದ್ದೇವೆ. ಅಶ್ಲೀಲತೆಯನ್ನು ಅನೈತಿಕತೆಯನ್ನು ಬಹಳ ಸರಳವಾಗಿ ತೆಗೆದುಕೊಳ್ಳುತ್ತೇವೆ ಇದರ ವಿರುದ್ಧ ನಮ್ಮ ನಿಯಮಗಳು ರೂಪಿಸುವ ಅವಶ್ಯಕತೆ ಇದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಬದುಕಿಗೆ ನಿಯಮಗಳು ನೀತಿಗಳು ಬೇಕಾಗಿದೆ ಇವೆಲ್ಲವೂ ಧರ್ಮಗಳು ಕಲಿಸಿಕೊಡುತ್ತವೆ. ಪರಸ್ಪರರ ಮಧ್ಯೆ ಅಸೂಹೆ ಆತ್ಮಹತ್ಯೆಗೆ ನಾಂದಿ ಹಾಡುತ್ತಿವೆ ಇವೆಲ್ಲವನ್ನೂ ನೋಡಿಕೊಂಡು ಸುಮ್ಮನಿದ್ದರೆ ಮುಂದಿನ ತಲೆಮಾರುಗಳಿಗೆ ಇದು ಘಾತಕವಾಗಿ ಮಾರ್ಪಡುತ್ತದೆ ಎಂದರು.

ಈ ಕಾರ್ಯಕ್ರಮದ ದಿವ್ಯಸಾನಿಧ್ಯ ಸ್ಥಾನವನ್ನು ಅಲಂಕರಿಸಿ ಮಾತನಾಡಿದ ಅಖಿಲ ಭಾರತ ದೇವಾಂಗ ಗುರುಗಳಾದ ಹಾಗೂ ಶ್ರೀ ಗಾಯತ್ರಿ ಪೀಠ ಮಹಾ ಸಂಸ್ಥಾನ ಹೇಮ ಕೂಟ ಹಂಪಿ ಇದರ ಪೀಠಾಧಿಪತಿಗಳಾದ ಶ್ರೀ ಶ್ರೀ ದಯಾನಂದ ಪುರಿ ಮಹಾಸ್ವಾಮಿಗಳು ಮಾತನಾಡಿ ಈ ಜಗತ್ತಿನಲ್ಲಿ ಯಾರೂ ಕೂಡ ಜಾತಿಯಲ್ಲಿ ಅಥವಾ ಈ ಧರ್ಮದಲ್ಲಿ ಹುಟ್ಟಿಸು ಎಂದು ದೇವರಲ್ಲು ಬೇಡಿ ಬಂದವರಲ್ಲ ಭೂಮಿಗೆ ಬರಬೇಕಾದರೆ ನಾವು ಏನನ್ನು ಪಡೆದುಕೊಂಡು ಬಂದವರಲ್ಲ ಹೋಗುವಾಗವೂ ಕೂಡ ಏನನ್ನೂ ತೆಗೆದುಕೊಂಡು ಹೋಗುವುದಿಲ್ಲ ಪಡೆದುಕೊಂಡು ಹೋಗುವುದು ಯಾವುದಾದರೂ ಇದ್ದರೆ ಅದು ನಮ್ಮ ಪುಣ್ಯ ಕರ್ಮಗಳು. ಪ್ರವಾದಿಗಳು ಶರಣರು ದಾಸಿಮಯ್ಯನವರು ಹೇಳಿದಂತೆ ಇಳೆ ನಿಮ್ಮ ದಾನ ಬೆಳೆ ನಿಮ್ಮದಾನ ಸುಳಿದು ಬೀಸುವ ಗಾಳಿ ಅದು ನಿಮ್ಮದಾನ ನಿಮ್ಮ ದಾನವನುಂಡು ಅನ್ಯರ ಹೊಗಳುವ ಕುನ್ನಿಗಳನೇನೆಂಬೆ ರಾಮನಾಥಾ ಎಂಬ ವಚನದ ಸಾಲದಲ್ಲಿ ನಮ್ಮ ಜೀವನವನ್ನು ಅಳವಡಿಸಿಕೊಳ್ಳುವ ಅವಶ್ಯಕತೆ ಇದೆ ಪ್ರಾಣಿಗಳಿಗಿಂತ ಮನುಷ್ಯನಿಗೆ ಒಂದು ಯೋಚನಾ ಶಕ್ತಿಯನ್ನು ದೇವನು ನೀಡಿದ್ದಾನೆ ಈ ಯೋಚನಾ ಶಕ್ತಿ ಧರ್ಮಗಳಿಂದ ಕಲಿಯಬೇಕಾಗುತ್ತದೆ ಬೆಳಕಿನೆಡೆಗೆ ಕರೆಯುವ ಸಾಧನವನ್ನು ಧರ್ಮ ಎಂದು ಕರೆಯುತ್ತೇವೆ ಎಂದು ಆಶೀರ್ವಚನ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷೀಯ ಸ್ಥಾನವನ್ನು ಅಲಂಕರಿಸಿ ಮಾತನಾಡಿದ ಜಮಾಅತೆ ಇಸ್ಲಾಮಿ ಹಿಂದ್ ಘಟಕದ ರಾಜ್ಯಾಧ್ಯಕ್ಷರಾದ ಡಾ" ಸಾದ್ ಬೆಳಗಾಮಿ ರವರು ಮಾತನಾಡಿ ಇಂದು ನಮ್ಮಲ್ಲಿ ಮಾನವೀಯತೆ ಕುಸಿಯುತ್ತಿದೆ ಭಿನ್ನಾಭಿಪ್ರಾಯಗಳು ಕೆಡುಕುಗಳು ವ್ಯಾಪಕವಾಗಿ ನಡೆಯುತ್ತಿವೆ ಭ್ರಷ್ಟಾಚಾರ ವಿಚಾರ ಅತ್ಯಾಚಾರಗಳಂತಹ ರೋಗಗಳಲ್ಲಿ ಸಮಾಜ ಸಿಲುಕುತ್ತಿದೆ , ಈ ಜಗತ್ತಿನಲ್ಲಿ ದೇವನು ನಮಗೆ ಸ್ವತಂತ್ರವಾಗಿ ಬಿಟ್ಟಿದ್ದಾನೆ ಇಂತಹದರಲ್ಲಿ ನಮ್ಮ ಜೀವನದ ಉದ್ದೇಶವನ್ನು ಅರಿತು ನಮ್ಮ ಸೃಷ್ಟಿಕರ್ತನನ್ನು ಅರಿತು ಬದುಕು ಕೊಟ್ಟಿಕೊಳ್ಳಬೇಕಾಗಿದೆ. ಒಳಿತನ್ನು ಸ್ಥಾಪಿಸಲು ಕೆಡಕನ್ನು ನಿರ್ಮೂಲನೆ ಮಾಡುವ ಜವಾಬ್ದಾರಿ ನಮ್ಮ ನಿಮ್ಮೆಲ್ಲರ ಮೇಲಿದೆ ಎಂದ ಅವರು ಕೆಡುಕನ್ನು ಪಸರಿಸಲಿಕ್ಕೆ ಆದ್ಯತೆಯನ್ನು ನೀಡಬಾರದು ಒಳಿತನ್ನು ಸಾಧಿಸುವ ಪ್ರಯತ್ನಗಳು ಸದಾ ಮಾಡುತ್ತಾ ಸಾಗಬೇಕು ಎಂದು ನುಡಿದರು.

ಈ ಕಾರ್ಯಕ್ರಮದಲ್ಲಿ ಶ್ರೀ ವಿ.ಮ.ವಿದ್ಯಾವರ್ಧಕ ಸಂಘ ಇಲಕಲ್ ಇದರ ವಾಯ್ಸ್ ಚೇರ್ಮನ್ ರಾಗಿರುವ ಶ್ರೀ ಅರುಣ್ ಎ ಬಿಜ್ಜಲ , ಜಮಾಅತೆ ಇಸ್ಲಾಮೀ ಹಿಂದ ನ ಸ್ಥಾನೀಯ ಅಧ್ಯಕ್ಷ ರಾದ ಜನಾಬ ಹುಸೇನ ಬಾಶಾ ಸುಳಿಭಾವಿ , ಗಣ್ಯರಾದ ಶ್ರೀ ಶಾಂತಕುಮಾರ್ ಸುರಪುರ ಶ್ರೀ ರಾಜು ಬೋರ , ಶ್ರೀ ಮುನಿಸ್ವಾಮಿ ದೇವಾಂಗಮಠ , ಶ್ರೀ ನಾಗಪ್ಪ ಕನ್ನೂರ , ಶ್ರೀ ಚನ್ನಪ್ಪ ಗೌಡ ನಾಡಗೌಡರು , ಶ್ರೀ ವಿಜಯ ಮಹಾಂತೇಶ್ ಗದ್ದನಕೇರಿ , ಪ್ರೊಫೆಸರ್ ಶಿವಾನಂದ , ಶ್ರೀ ರವೀಂದ್ರ ಕಲಬುರ್ಗಿ , ಶ್ರೀ ಸಂತೋಷ್ ಬನ್ನಟ್ಟಿ , ಶ್ರೀ ಸಂತೋಷ್ ಬಸವರಾಜ ಐಹೊಳಿ , ಶ್ರೀ ಶರಣಬಸಪ್ಪ ಆಜೂರ , ಶ್ರೀನಿವಾಸ್ ಜಾಧವ , ಶ್ರೀ ವಿಶ್ವನಾಥ ವಿ ಪಾಟೀಲ , ಶ್ರೀ ಹನುಮಂತಪ್ಪ ರಾಥೋಡ , ಶ್ರೀ ಸುರೇಶ್ ಜಂಗಲಿ , ಶ್ರೀ ಮಹಾಂತೇಶ್ ಹನಮನಾಳ , ಡಾ"ಪವನಕುಮಾರ ದರಕ , ಶ್ರೀ ಮಹಾಂತೇಶ ಹನುಮನಾಳ , ಜನಾಬ ಹುಸೇನಸಾಬ ಬಾಗವಾನ , ಜನಾಬ್ ಮೊಹಮ್ಮದ್ ಭಾವಿಕಟ್ಟಿ , ಶ್ರೀ ವೆಂಕಟೇಶ ರಾಥೋಡ , ಶ್ರೀ ಮೌಲಪ್ಪ ಬಂಡಿ ವಡ್ಡರ , ಜನಾಬ್ ಮೊಹಮ್ಮದ್ ಗೌಸ್ ನದಾಫ್, ಜನಾಬ ಸೈಯದ್ ಬಹಾವುದ್ದೀನ್ ಖಾಜಿ , ಜನಾಬ್ ಕಾಸಿಮಸಾಬ ವಂಟಿ , ಶ್ರೀ ಎಲ್ಲಪ್ಪ ಪೂಜಾರಿ ಶ್ರೀ ಎಂ ಬಿ ದೇಶಪಾಂಡೆ , ಶ್ರೀ ಮಹಾಂತೇಶ ಕಡಿವಾಲ, ಮೌಲಾನ ಮುಫ್ತಿ ಹಸನ್ ಶಾಹಿ , ಜನಾಬ ಮೊಹಮ್ಮದ್ ಆಸಿಫ್ ಬಿಳೇಕುದುರಿ , ಮೌಲಾನ ಮೊಹಮ್ಮದ್ ಹುಸೇನ್ ರಶಾದಿ, ಜನಾಬ ಮೊಹಮ್ಮದ್ ರಫೀಕ್ ಮುದಗಲ್ , ಜನಾಬ ರಾಜು ಏನ್ ಬನ್ನಿಗೋಳ , ಜನಾಬ ಸುಈದ್ ಅಹಮದ್ ಕೋತ್ವಾಲ್ , ಶ್ರೀ ನಾಗರಾಜ್ ಮದಿಕೇರಿ , ಜನಾಬ ಅಬ್ದುಲ್ ರಜಾಕ್ ಹಳ್ಳಿ , ಜನಾಬ ಮೆಹಬೂಬಸಾಬ ಆರಿ , ಶ್ರೀ ಅಶೋಕ ಗಂಜಿಹಾಳ , ಶ್ರೀ ನೀಲಪ್ಪ ಡೊಳ್ಳಿ, ಜನಾಬ್ ಪರ್ವೇಜ್ ಕಾಜಿ , ಜನಾಬ ಅಬೂಬಕರ್ ಎಲ್ ಬೇಪಾರಿ, ಜನಾಬ ಮೊಹಮ್ಮದ್ ರಫೀಕ್ ಚಿತ್ತರಗಿ, ಶ್ರೀಮತಿ ಶರಣಮ್ಮ ತಳವಾರ್, ಡಾ" ಸಿತಿ ಮಾ ವಜ್ಜಲ , ಶ್ರೀಮತಿ ಸರಸ್ವತಿ ಈಟಿ , ಶ್ರೀಮತಿ ಮಂಜುಳಾ ಗರಡಿಮನಿ , ಶ್ರೀಮತಿ ವಿದ್ಯಾ ದಿನ್ನಿ , ಶ್ರೀಮತಿ ವೈಶಾಲಿ ಘಂಟಿ , ಶ್ರೀಮತಿ ಸುಮಿತ್ರ ರಜಪೂತ ಹಾಗೂ ಸಹಸ್ರಾರು ಸಂಖ್ಯೆಯಲ್ಲಿ ಸಹೋದರ ಸಹೋದರಿಯರು ಉಪಸ್ಥಿತರಿದ್ದರು

ಮೊಹಮ್ಮದ್ ಸಿರಾಜುದ್ದೀನ್ ಹುಮನಾಬಾದ್ ಕುರಾನ್ ಪಠಿಸಿದರು ಶ್ರೀ ಸಂಗಣ್ಣ ಗದ್ದಿ ಪ್ರವಚನ ಸ್ವಾಗತ ಸಮಿತಿಯ ಸದಸ್ಯರು ಸ್ವಾಗತ ಭಾಷಣ ಮಾಡಿದರು , ಜನಾಬ ಮೆಹಬೂಬ್ ಹುಸೇನ್ ಗಬ್ಬೂರ ಹಾಗೂ ಅಬ್ದುಲ್ ಗಫ್ಫಾರ್ ತಹಶೀಲ್ದಾರ್ ರವರು ನಿರೂಪಿಸಿದರು ಜನಾಬ ಮಹಮ್ಮದ್ ಹುಸೇನ್ ಬಾಗವಾನ್ ರವರು ವಂದಿಸಿದರು.

## ಮಸ್ಕಿ: ರಾಜ್ಯಮಟ್ಟದ ವಿಚಾರ ಸಂಕಿರಣ: ಡಾ.ಮಾಹಾಂತಗೌಡ ಪಾಟೀಲ್

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಇದೆ 31 ಡಿಸೆಂಬರ್,2025 ರಂದು ದೇವಾನಂಪ್ರಿಯ ಅಶೋಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಮಸ್ಕಿ,ಹಾಗೂ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ ರಾಯಚೂರು,ಇವರ ಸಹಯೋಗದಲ್ಲಿ ಮಸ್ಕಿ ಕಾಲೇಜಿನಲ್ಲಿ "ಮಸ್ಕಿ ಪರಿಸರ: ಪುರಾತತ್ವ,ಇತಿಹಾಸ ಮತ್ತು ಸಂಸ್ಕೃತಿ".ವಿಷಯ ಕುರಿತು ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ ನಡೆಯಲಿದೆ ಎಂದು ಕಾಲೇಜಿನ ಪ್ರಾಂಶುಪಾಲರಾದ ಡಾ.ಮಹಾಂತಗೌಡ ಪಾಟೀಲ್ ರವರು ಮಾತನಾಡಿ ವಾಲ್ಮೀಕಿ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಶಿವಾನಂದ ಕೆಳಗಿನಮನಿ,ಕುಲಸಚಿವರಾದ ಡಾ.ಎ.ಚನ್ನಪ್ಪ ಹಾಗೂ ವಿವಿಧ ವಿಶ್ವವಿದ್ಯಾಲಯಗಳ ಇತಿಹಾಸ ತಜ್ಞರು,ಪ್ರಾಧ್ಯಾಪಕರು ಹಾಗೂ ಇತಿಹಾಸ ವಿಭಾಗದ ಮುಖ್ಯಸ್ಥರು ಭಾಗವಹಿಸಲಿದ್ದಾರೆ.**



ಹಾಗೆಯೇ ಕರ್ನಾಟಕ ಇತಿಹಾಸ ಅಕಾಡೆಮಿ ಅಧ್ಯಕ್ಷರಾದ ಡಾ.ದೇವರಕೊಂಡಾರೆಡ್ಡಿ ಇವರು ವಿಷಯ ಮಂಡಿಸಲಿದ್ದು,ತದನಂತರ ತಜ್ಞರಿಂದ ಗೋಷ್ಠಿಗಳು ನಡೆಯಲಿವೆ.ಇದರ ಸದುಪಯೋಗವನ್ನು ಇತಿಹಾಸ ವಿದ್ಯಾರ್ಥಿಗಳು,ಇತಿಹಾಸ ಆಸಕ್ತರು ಹಾಗೂ ಸಮಸ್ತ ನಾಗರಿಕರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಪತ್ರಿಕಾ ಪ್ರಕಟಣೆ ಮೂಲಕ ಮನವಿ ಮಾಡಿದರು

## ಎಂ.ಎನ್.ಆರ್.ಇ.ಜಿ.ಎ ನಿರ್ನಾಮ ನಿಲ್ಲಿಸಲು ಮೋದಿ ಸರ್ಕಾರಕ್ಕೆ ಸಂಯುಕ್ತ ಕಿಸಾನ್ ಮೋರ್ಚ್ ಎಚ್ಚರಿಕೆ.

ನೈಜ್ಯ ದೆಸೆ ನ್ಯೂಸ್

**ತಾಲೂಕಿನ ಮುಳ್ಳೂರು, ಮಲ್ಲಾಪುರ, ಗ್ರಾಮದಲ್ಲಿ ಕೇಂದ್ರ ಸರ್ಕಾರದ ಹೊಸ ಕಾಯ್ದೆಯಾದ ನರೇಗಾ ಕಾರ್ಮಿಕರು ಸುಟ್ಟು ಹಾಕಿದರು. ಕೇಂದ್ರ ಸರ್ಕಾರ ಉದ್ಯೋಗ ಖಾತ್ರಿ ಯೋಜನೆ ಸಂಪೂರ್ಣವಾಗಿ ಮುಚ್ಚುವ ಹುನ್ನಾರ ಮಾಡುತ್ತಿದೆ ಎಂದು**



**ಉದ್ಯೋಗ ಖಾತ್ರಿ ಕಾರ್ಮಿಕರು, ರೈತರು, ಆಕ್ರೋಶಗೊಂಡರು.**

ವಿಬಿ–ಜಿ.ಆರ್.ಎ.ಎಮ್.ಜಿ ಶಾಸನವು ಉದ್ಯೋಗದ ಶಾಸನಬದ್ಧ ಹಕ್ಕನ್ನು ನಿರಾಕರಿಸುತ್ತದೆ. ವಿತ್ತೀಯ ಒಕ್ಕೂಟ ವ್ಯವಸ್ಥೆಯನ್ನು ಹಾಳುಮಾಡುತ್ತದೆ. ಜಿಎಸ್ಟಿ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ರಾಜ್ಯಗಳ ತೆರಿಗೆ ಅಧಿಕಾರವನ್ನು ಮರುಸ್ಥಾಪಿಸಬೇಕು. ತೆರಿಗೆ ಸಂಗ್ರಹದಲ್ಲಿ ರಾಜ್ಯಗಳಿಗೆ ಪಾಲನ್ನು ಶೇ.60 ರಷ್ಟು ಹೆಚ್ಚಿಸಬೇಕು. ದೇಶದಲ್ಲಿ ಬರುವ ಆದಾಯ ಕೇಂದ್ರಕ್ಕೆ ಹೋರಟಿದೆ ಬಡವರ ಉದ್ಯೋಗ ಖಾತ್ರಿ ರಾಜ್ಯ ಶೇ. 40 ರಷ್ಟು, ಕೇಂದ್ರ ಶೇ. 60 ರಷ್ಟು ಹಣ ಒದಗಿಸಬೇಕೆಂಬ ಹೊಸ ಕಾಯ್ದೆಯನ್ನು ಡಿಸೆಂಬರ್ 15 ರಂದು ಮಾಡಿದೆ. 20 ವರ್ಷಗಳಿಂದ ಉದ್ಯೋಗ ಖಾತ್ರಿಯ ಹಣ ಕೇಂದ್ರ ಸರ್ಕಾರವೆ ಕೊಟ್ಟಿದೆ. ಈಗ ಏಕಾಏಕಿ ಈ ರೀತಿ ಮಾಡಿ ಉದ್ಯೋಗವನ್ನ ಮುಚ್ಚಾವ ಮಾಸ್ಟರ್ ಪ್ಲಾನ್ ಕೇಂದ್ರ ಸರ್ಕಾರ ಮಾಡುತ್ತಿದೆ. ಈ ಹೊಸ ಕಾಯ್ದೆಯನ್ನು ಎಲ್ಲಾ ರೈತರು ಕೃಷಿಯಲ್ಲಿ ಕೆಲಸ ಮಾಡುವರು ವಿರೋಧಿಸಬೇಕಿದೆ ಎಂದು ಬಸವಂತರಾಯಗೌಡ ಕಲ್ಲೂರು, ಯಂಕೋಬ ಕುರುಬರು, ವಿರುಪಾಕ್ಷಗೌಡ, ನಾಗೇಶಗೌಡ, ಹೇಳಿದರು. ಈ ವೇಳೆ: ಮಲ್ಲಾಪುರದ ಗಿರಿಜಮ್ಮ ನಾಯಕ, ಶೃತಿ ಮೇಟಿ, ಪಾರ್ವತಿ ಕುಂಬಾರ, ಮಲ್ಲಪ್ಪ ಬೆಟ್ಟಪ್ಪ, ನಾಗಮ್ಮ ಭಂಡಾರಿ ನಾಗವೇಣಿ ಹಾಗೂ ಮುಳ್ಳೂರು ಗ್ರಾಮದ ಅನುಸೂಯಮ್ಮ, ಖಾಜಾಬಿ, ನಾಗಮ್ಮ ಗೌಡ್ರು, ನೀಲಮ್ಮ ಮರಿಯಪ್ಪ ಹುಲ್ಲಿಗಪ್ಪ, ಸೇರಿದಂತೆ ನೂರಾರು ರೈತರಿದ್ದರು.

## ಸರ್ಕಾರದ ಯೋಜನೆಗಳ ಯಶಸ್ವಿಗೆ ಅಂಗನವಾಡಿ ಕಾರ್ಯಕರ್ತೆಯರ ಪಾತ್ರ ಹೆಚ್ಚಿದೆ: ಡಿಎಚ್ ಕಂಬಳಿ

ನೈಜ್ಯ ದೆಸೆ ನ್ಯೂಸ್

**ರಾಯಚೂರು ಅಂಗನವಾಡಿ ಕಾರ್ಯಕರ್ತರು ಸಮಾಜದ ನೆಲಮಟ್ಟದಲ್ಲಿ ಆರೋಗ್ಯ ಮತ್ತು ಶಿಕ್ಷಣದ ಭದ್ರತೆಯನ್ನು ಸೈನಿಕರಂತೆ ಕಾಯುತ್ತಿದ್ದಾರೆ. ಸರ್ಕಾರದ ಯಾವುದೇ ಯೋಜನೆ ಅಥವಾ ಪ್ರಾಜೆಕ್ಟ್ ಯಶಸ್ವಿ ಆಗಬೇಕಾದರೆ, ಅದರ ನೆಲಮಟ್ಟದ ಜಾರಿಗೆ ಅಂಗನವಾಡಿ ಕಾರ್ಯಕರ್ತೆಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಅಂಗನವಾಡಿ ಫೆಡರೇಶನ್ ಜಿಲ್ಲಾ ಗೌರವಾಧ್ಯಕ್ಷ ಡಿ.ಎಚ್.ಕಂಬಳಿ ಹೇಳಿದರು.**

ನಗರದ ಎಪಿಎಂಸಿ ಭವನದಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ತಾಲೂಕು ಸಮ್ಮೇಳನ



ಉದ್ಘಾಟಿಸಿ ಮಾತನಾಡಿದ ಅವರು, ಅನೇಕ ಹಿರಿಯ ವಯಸ್ಸಿನ ಅಂಗನವಾಡಿ ಕಾರ್ಯಕರ್ತೆಯರಿದ್ದಾರೆ, ಆಧುನಿಕ ತಂತ್ರಜ್ಞಾನದಲ್ಲಿ ಹಿಂದುಳಿದಿದ್ದರೂ ಸಹ, ಸ್ಮಾರ್ಟ್‌ಫೋನ್, ಆನ್‌ಲೈನ್ ಡಿಜಿಟಲ್, ದಾಖಲೆಗಳಂತಹ ಹೊಸ ವ್ಯವಸ್ಥೆಗಳಿಗೆ ಹೊಂದಿಕೊಳ್ಳಲು ಸಾಕಷ್ಟು ಸವಾಲುಗಳಿದ್ದರೂ, ತಮ್ಮ ಕರ್ತವ್ಯದಲ್ಲಿ ಯಾವುದೇ ಕೊರತೆ ಬಾರದಂತೆ ಅವರು ಶ್ರಮಿಸುತ್ತಿದ್ದಾರೆ. ನಮಗೆ ಸ್ವಾಭಿಮಾನ ತಂದುಕೊಟ್ಟಿದ್ದು ಸಂಘಟನೆ, ಆದ್ದರಿಂದ ನಾವೆಲ್ಲರೂ ಒಟ್ಟಾಗಿ ಹೋರಾಡಬೇಕು, ನಮ್ಮ ಧ್ವನಿಯನ್ನು ಗಟ್ಟಿಯಾಗಿ ಒಗ್ಗೂಡಿಸಬೇಕು ಹಾಗೂ ಇನ್ನಷ್ಟು ಬಲಿಷ್ಠರಾಗಬೇಕು ಎಂದು ಕಾರ್ಯಕರ್ತೆಯರಿಗೆ ಸಲಹೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಎಐಟಿಯುಸಿ ಜಿಲ್ಲಾಧ್ಯಕ್ಷ ಬಾಷುಮಿಯಾ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀಶೈಲರೆಡ್ಡಿ, ಕರ್ನಾಟಕ ಜನಶಕ್ತಿ ಮುಖಂಡ ಬಸವರಾಜ ಬಾದರ್ಲಿ, ಉಪನ್ಯಾಸಕ, ಹಿರಿಯ ಹೋರಾಟಗಾರರು ಚಂದ್ರಶೇಖರ್ ಗೊರೆಬಾಳ, ಗಿರಿಜಮ್ಮ, ಸಿಡಿಪಿಒ ಅಶೋಕ ತುರ್ವಿಹಾಳ, ಸುಲೋಚನಾ, ಸಂಗಯ್ಯಸ್ವಾಮಿ, ರತ್ನಮ್ಮ, ಹಾಗೂ ಇನ್ನಿತರರು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

## ಮಾನ್ವಿಯಲ್ಲಿ ಉಚಿತ ಮುಸ್ಲಿಂ ಸಾಮೂಹಿಕ ವಿವಾಹ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಮಾನ್ವಿ ಪಟ್ಟಣದ ಪ್ರಥಮ ದರ್ಜೆ ಗುತ್ತೇದಾರರು ಕಲ್ಲು ಗಣಿಗಾರಿಕೆಯ ಮಾಲೀಕರು, ದಾರುಸ್ಸಲಾಮ್ ಸಹಕಾರಿ (ಬಡ್ಡಿ ರಹಿತ) ಬ್ಯಾಂಕಿನ ಅಧ್ಯಕ್ಷರು, ಸಮಾಜ ಸೇವಕರಾದ ಸೈಯದ್ ಅಕ್ಬರ್ ಪಾಶ ಇವರು ತಮ್ಮ ಹಿರಿಯ ಸುಪುತ್ರನ ವಲಿಮಾ ಸಮಾರಂಭದಲ್ಲಿ 101 ಮುಸ್ಲಿಂ ಸಾಮೂಹಿಕ ವಿವಾಹಗಳನ್ನು ಏರ್ಪಡಿಸಿದ್ದಾರೆ, ನಗರದಲ್ಲಿ ಉಚಿತ ಮುಸ್ಲಿಂ ಸಾಮೂಹಿಕ ವಿವಾಹ ಕಾರ್ಯಕ್ರಮ.**

ಜನೆವರಿ 18 ರಂದು, ಅಕ್ಬರಿ ಮಸೀದಿ ಮಾನ್ವಿ ಆವರಣದಲ್ಲಿ , ಏರ್ಪಡಿಸಲಾಗಿದ್ದು . ಈ ಸಾಮೂಹಿಕ ವಿವಾಹ ಕಾರ್ಯಕ್ರದಲ್ಲಿ ವಿವಾಹ ಮಾಡಿಕೊಳ್ಳಲು ಅಥವಾ ಪಾಲುಗೊಳ್ಳಲು ಆಸಕ್ತಿ ಉಳ್ಳವರು ಜನೆವರಿ 05 ಕೊನೆಯ ದಿನವಾಗಿದೆ, ನೋಂದಣಿ ಮಾಡಿಕೊಳ್ಳಲು ಅವಕಾಶವಿದೆ. ಈ ಸಮಾಜಮುಖಿಯ




ಉತ್ತಮ ಕಾರ್ಯಕ್ರಮವನ್ನು ಎಲ್ಲರೂ ಬೆಂಬಲಿಸಿ ಯಶಸ್ವಿಯಾಗಲು ಸಹಕರಿಸಬೇಕು,

ಏಕೆಂದರೆ ಹಣ ಆಸ್ತಿ ಅಂತಸ್ತು ಕೆಲವು ಜನರು ಮಾತ್ರ ಗಳಿಸುತ್ತಾರೆ ಆದ್ರೆ ಸಮಾಜಕ್ಕಾಗಿ ಈ ರೀತಿಯ ಕಾರ್ಯಕ್ರಮ ಮಾಡುವುದು ಅಪರೂಪ. ಹಣ ಗಳಿಸಿ, ಗಳಿಸಿದ ಹಣವನ್ನು ಪುಣ್ಯದ ಕಾರ್ಯದಲ್ಲಿ ಖರ್ಚು ಮಾಡುವುದು ತೀರಾ ಕಡಿಮೆ, ಇವರು ರಾಯಚೂರು ಜಿಲ್ಲೆಯ ಹಲವು ಮಸೀದಿ ಮದರಸಾಗಳಿಗೆ ಏರ್ ಕೂಲರ್, ಫ್ಯಾನ್, ಇನ್ನಿತರೇ ರೂಪದಲ್ಲಿ ದೇಣಿಗೆ ಕೊಟ್ಟಿದ್ದಾರೆ ಹಾಗೂ ವಿಧುವೆಯರಿಗೆ, ಅಂಗವಿಕಲರಿಗೆ ವಯಸ್ಸಾದ ಹಿರಿಯ ನೂರಾರು ಜನರಿಗೆ ಮಾಶಾಸನ (ಪಿಂಚಣಿ) ಕೊಡ್ತಾರೆ ಸರ್ವ ಧರ್ಮದ ಹಲವು ಸಂಘಟನೆಗಳಿಗೂ ದೇಣಿಗೆ ನೀಡಿರುತ್ತಾರೆ ಎಂದು ತಿಳಿದಿದೆ, ಇದರಿಂದ ಇವರ ಹೆಸರು ಹೆಚ್ಚಾಗಿದೆ, ಹಣ ಮತ್ತು ಹೆಸರು ಮಾಡಿದಾಗ, ಆರೋಪ ಅಪವಾದ, ಪರ ವಿರೋಧ ಬರೋದು ಸಹಜ, ಆದರೂ ಅದನ್ನೆಲ್ಲ ಲೆಕ್ಕಿಸದೆ ತಮ್ಮ ಸೇವಾ ಕಾರ್ಯಕ್ರಮಗಳನ್ನು ಮುಂದುವರಿಸಿದ್ದು ಅಕ್ಬರ್ ಪಾಶ ಅವರ ಕಾರ್ಯ ಮೆಚ್ಚಲೇಬೇಕು. ಹಲವಾರು ಜನ ತಮ್ಮ ಬದುಕು ಕಟ್ಟಿಕೊಳ್ಳಲು ಮಾನ್ವಿಗೆ ಬಂದು ಸಾಕಷ್ಟು ಬೆಳೆದಿದ್ದಾರೆ, ಆದ್ರೆ ಅಕ್ಬರ್ ಪಾಶ ಮಾತ್ರ ಮಾನ್ವಿ ನೆಲದ ಋಣ ತೀರಿಸುತ್ತಿದ್ದಾರೆ ಎಂಬುದು ನನ್ನ ಅಭಿಪ್ರಾಯ.

ಮೂಲತಃ ಕೊಪ್ಪಳ ಜಿಲ್ಲೆಯವರಾದ ಇವರು ಸುಮಾರು 30 ವರ್ಷಗಳಿಂದ ನಮಗೆ ಗೊತ್ತು, ರಾಯಚೂರಿನ ಪ್ರಿಂಟಿಂಗ್ ಪ್ರೆಸ್ ನಲ್ಲಿ ಕೆಲಸ ಮಾಡುತ್ತಿದ್ದ ಅಕ್ಬರ್ ಪಾಶ ತುಂಬಾ ಕಷ್ಟದಿಂದ ಬೆಳೆದಿದ್ದು ನೋಡಿದ್ದೇವೆ, ಅಕ್ಬರ್ ಪಾಶ ಅವರೊಂದಿಗೆ ನಮಗೆ ಯಾವುದೇ ತರಹದ ವ್ಯವಹಾರ, ಸಂಪರ್ಕ ಇಲ್ಲದಿದ್ದರೂ ಸಹ ಅವರ ಚಟುವಟಿಕೆಗಳು ತಿಳಿದಿದೆ. ಅದೇನೇ ಇರಲಿ, ಈ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಬೆಂಬಲಿಸೋಣ. ಹೊಗಳುವವರೆಲ್ಲಾ ಮಿತ್ರರಲ್ಲ, ತೆಗಳುವವರೆಲ್ಲಾ ಶತ್ರುಗಳಲ್ಲ. ಮುಂದಿನ ದಿನಗಳಲ್ಲಿ ಸರ್ವಧರ್ಮಗಳ ಉಚಿತ ಸಾಮೂಹಿಕ ವಿವಾಹಗಳು ಏರ್ಪಡಿಸುವಂತಾಗಲಿ ಎಂದು ಹಾರೈಸುವೆ, ಶುಭವಾಗಲಿ.

ಎಸ್. ಹೆಚ್.ಸಾಜಿದ್ ಖಾದ್ರಿ, ಮಾನ್ವಿ.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### MD Practice of Medicine.

MD (ಡಾಕ್ಟರ್ ಆಫ್ ಮೆಡಿಸಿನ್) ಪ್ರಾಕ್ಟೀಸ್ ಆಫ್ ಮೆಡಿಸಿನ್‌ನಲ್ಲಿ 3 ವರ್ಷಗಳ ಸ್ನಾತಕೋತ್ತರ ವಿಶೇಷತೆಯಾಗಿದ್ದು, ಹೆಚ್ಚಾಗಿ ಹೋಮಿಯೋಪತಿ ಅಥವಾ ಜನರಲ್ ಮೆಡಿಸಿನ್‌ಗೆ, ಆಳವಾದ ರೋಗನಿರ್ಣಯ, ಶಸ್ತ್ರಚಿಕಿತ್ಸೆಯಲ್ಲದ ಚಿಕಿತ್ಸೆ ಮತ್ತು ಸ್ಥಾಪಿತ ತತ್ವಗಳನ್ನು ಬಳಸಿಕೊಂಡು ರೋಗಿಯ ನಿರ್ವಹಣೆಯ ಮೇಲೆ ಕೇಂದ್ರೀಕರಿಸುತ್ತದೆ. ಇದಕ್ಕೆ MBBS/BHMS, 1 ವರ್ಷದ ಇಂಟರ್ನ್‌ಶಿಪ್ ಮತ್ತು ಓಇಇಖಿ ಕಉ (ಸಾಂಪ್ರದಾಯಿಕ ಒಆ ಗಾಗಿ) ಅಥವಾ ಂಖಂಕಉಇಖಿ (ಹೋಮಿಯೋಪತಿಗಾಗಿ) ನಂತಹ ಪರೀಕ್ಷೆಗಳ ಮೂಲಕ ಪ್ರವೇಶದ ಅಗತ್ಯವಿದೆ. ಕೋರ್ಸ್ ಸುಧಾರಿತ ಸಿದ್ಧಾಂತ, ಸಂಶೋಧನೆ (ಪ್ರಬಂಧ) ಮತ್ತು ಪ್ರಾಯೋಗಿಕ ಕ್ಲಿನಿಕಲ್ ತರಬೇತಿಯನ್ನು ಸಂಂ-ಯೋಜಿಸುತ್ತದೆ, ಇದು ಆಸ್ಪತ್ರೆಗಳು, ಚಿಕಿತ್ಸಾಲಯಗಳು ಅಥವಾ ಸಂಶೋಧನೆಯಲ್ಲಿ ತಜ್ಞರಾಗಿ ವೃತ್ತಿಜೀವನಕ್ಕೆ ಕಾರಣವಾಗುತ್ತದೆ. ಕೋರ್ಸ್ ಅವಲೋಕನ ಪೂರ್ಣ ರೂಪ: ಡಾಕ್ಟರ್ ಆಫ್ ಮೆಡಿಸಿನ್. ಅವಧಿ: ಸಾಮಾನ್ಯವಾಗಿ 3 ವರ್ಷಗಳು, ಸಿದ್ಧಾಂತ, ಸಂಶೋಧನೆ ಮತ್ತು ಕಡ್ಡಾಯ ಇಂಟರ್ನ್‌ಶಿಪ್/ಮನೆ ಕೆಲಸ ಸೇರಿದಂತೆ.ರೋಗಗಳನ್ನು ಪತ್ತೆಹಚ್ಚುವ ಮತ್ತು ಚಿಕಿತ್ಸೆ ನೀಡುವ ಶಸ್ತ್ರಚಿಕಿತ್ಸೆಯಲ್ಲದ ಅಂಶಗಳಲ್ಲಿ ಪರಿಣತಿ. ಅರ್ಹತೆ ಮತ್ತು ಪ್ರವೇಶ MBBS (ಸಾಂಪ್ರದಾಯಿಕ MD ಗಾಗಿ) ಅಥವಾ BHMS (ಹೋಮಿಯೋಪತಿ MD ಗಾಗಿ) ಪೂರ್ಣಗೊಳಿಸುವಿಕೆ.ಇಂಟ-ರ್ನ್‌ಶಿಪ್: ಪದವಿ ನಂತರ ಕಡ್ಡಾಯ 1 ವರ್ಷದ ಇಂಟರ್ನ್‌ಶಿಪ್. ಪ್ರವೇಶ ಪರೀಕ್ಷೆ: NEET PG (ಸಾಂಪ್ರದಾಯಿಕ MD ಗಾಗಿ) ಅಥವಾ AIAPGET (ಹೋಮಿಯೋಪತಿಗಾಗಿ). ಜನರಲ್ ಮೆಡಿಸಿನ್: ಸುಧಾರಿತ ಆಂತರಿಕ ಔಷಧ, ರೋಗನಿರ್ಣಯ, ಔಷಧಶಾಸ್ತ್ರ, ಕ್ಲಿನಿಕಲ್ ಸಾಂಕ್ರಾಮಿಕ ರೋಗಶಾಸ್ತ್ರ ಮತ್ತು ವಿವಿಧ ರೋಗಗಳ ನಿರ್ವಹಣೆ.ಹೋಮಿಯೋಪತಿ (ಅನ್ವಯಿಸಿದರೆ): ಹೋಮಿಯೋಪತಿ ತತ್ವಗಳು, ಕೇಸ್-ಟೇಕಿಂ-ಗ್, ಪರಿಹಾರ ಆಯ್ಕೆ ಮತ್ತು ಸಂಶೋಧನಾ ವಿಧಾನದಲ್ಲಿ ಆಳವಾಗಿ ಮುಳುಗಿ. ಸಂಶೋಧನೆ: ಸಂಶೋಧನಾ ವಿಧಾನ, ಬಯೋಸ್ಟಾಟಿಸ್ಟಿಕ್ಸ್ ಮತ್ತು ಪ್ರಬಂಧ ಸಲ್ಲಿಕೆಯನ್ನು ಒಳಗೊಂಡಿದೆ. ವೃತ್ತಿ ನಿರೀಕ್ಷೆಗಳು ಪಾತ್ರಗಳು: ಸಾಮಾನ್ಯ ವೈದ್ಯರು, ತಜ್ಞ ಸಲಹೆಗಾರರು (ಹೃದಯಶಾಸ್ತ್ರ, ನರವಿಜ್ಞಾನ, ಇತ್ಯಾದಿ), ಬ್ಯಾಕ್ಟೀರಿಯಾಲಜಿಸ್ಟ್, ಸಂಶೋಧಕರು, ಶಿಕ್ಷಕರು

## 24 ವಿದ್ಯಾರ್ಥಿಗಳಿಗೆ ಸ್ವಂತ ಖರ್ಚಿನಲ್ಲಿ ವಿಮಾನ ಪ್ರವಾಸ ಮಾಡಿಸಿದ ಮುಖ್ಯ ಶಿಕ್ಷಕ

ನೈಜ್ಯ ದೆಸೆ ನ್ಯೂಸ್

**ಬಹದ್ದೂರುಬಂಡಿ: ಡಿಸೆಂಬರ್ 27: ರಾಜ್ಯದ ಸರ್ಕಾರಿ ಶಾಲೆಯೊಂದರ ಮಕ್ಕಳಿಗೆ ಮುಖ್ಯೋಪಾಧ್ಯಾಯರು ಸ್ವಂತ ಲಕ್ಷಾಂತರ ರೂಪಾಯಿ ಖರ್ಚಿನಲ್ಲಿ ವಿಮಾನಯಾನದ ಅವಕಾಶ ಕಲ್ಪಿಸುವ ಮೂಲಕ ವಿದ್ಯಾರ್ಥಿಗಳ ಪಠ್ಯೇತರ ಕನಸುಗಳನ್ನು ನನಸಾಗಿಸಿದ್ದಾರೆ. ಮೊದಲ ಬಾರಿಗೆ ವಿಮಾನ ಏರಿದ ಖುಷಿ ಮಕ್ಕಳ ಮೊಗದಲ್ಲಿ ರಾರಾಜಿಸಿತು. ಕೊಪ್ಪಳ ಜಿಲ್ಲೆಯ ಬಹದ್ದೂರುಬಂಡಿ ಗ್ರಾಮದ ಈ ಸರ್ಕಾರಿ ಶಾಲಾ ಶಿಕ್ಷಕರ ಈ ಕಾರ್ಯಕ್ಕೆ ಭರಪೂರ ಮೆಚ್ಚುಗೆ ವ್ಯಕ್ತವಾಗಿದೆ. ಸಾಮಾಜಿ-ಕ ಜಾಲತಾಣದಲ್ಲಿ ಈ ಸುದ್ದಿ ವೈರಲ್ ಆಗುತ್ತಿದೆ.**

ಕೊಪ್ಪಳ ಜಿಲ್ಲೆಯ ಬಹದ್ದುರಬಂಡಿ ಗ್ರಾಮದ ಸರ್ಕಾರಿ ಶಾಲೆಯ 24 ಮಕ್ಕಳು ಆಗಸದಲ್ಲಿ ಹಾರಾಡಿ ನಲಿದರು. ವಿಮಾನಯಾನದ ಅದ್ಭುತ ಕ್ಷಣ ಅನುಭವಿಸಿ ಸಂತಸಪಟ್ಟರು. ಶಾಲೆಯ ಮುಖ್ಯೋಪಾಧ್ಯಾಯ ಬೀರಪ್ಪ ಅಂಡಗಿ ಅವರು ಡಿಸೆಂಬರ್ 26 ಶುಕ್ರವಾರ ಈ ವಿಮಾನಯನ ಪ್ರಯಾಣ




ಆಯೋಜಿಸಿದ್ದರು. ಮಕ್ಕಳ ಭವಿಷ್ಯದ ಏಳಿಗೆಗೆ ಜೊತೆಗೆ ಅವರ ವಿಮಾನ ಹಾರಾಟದ ಕನಸಿಗೂ ನೀರೆರೆದಿದ್ದಕ್ಕೆ ಪೋಷಕರು ಅವ-ರಿಗೆ ಧನ್ಯವಾದ ತಿಳಿಸಿದ್ದಾರೆ. ನೆಟ್ಟಿಗರು ಅಂಡಗಿ ಅವರಿಗೆ ಸೆಲ್ಯೂಟ್ ಹೊಡೆದಿದ್ದಾರೆ.

ಮುಖ್ಯೋಪಾಧ್ಯಾಯರು ಇದಕ್ಕೆಂದೆ ವಿವಿಧ ಮೂಲಗಳಿಂದ ಸುಮಾರು 5 ಲಕ್ಷ ರೂ.ಗಳನ್ನು ಹೊಂದಿಸಿದರು. ಆ ಹಣದಲ್ಲಿ ವಿದ್ಯಾರ್ಥಿಗಳ ವಿಮಾನಯಾನ ಪ್ರವಾಸ ಆಯೋಜಿಸಿದರು. ಈ ವಿಮಾನವು ತೋರಣಗಲ್ಲಿನ ಜಿಂದಾಲ್ ವಿಮಾನ ನಿಲ್ದಾಣದಿಂದ ಮಕ್ಕಳನ್ನು ಬೆಂಗಳೂ-ರಿಗೆ ಕರೆತಂದರು. ವಿಮಾನ ಹೊರಡುವ ಮುನ್ನ ಸಂಸದ ರಾಜಶೇಖರ್ ಹಿಟ್ನಾಳ್ ಅವರು ವಾಯು ಪ್ರಯಾಣಕ್ಕೆ ಚಾಲನೆ ಕೊಟ್ಟರು. ಅಲ್ಲದೇ ಮುಖ್ಯೋಪಾಧ್ಯಾಯರು ಗ್ರಾಮೀಣ ಶಿಕ್ಷಣಕ್ಕೆ ನೀಡುವ ಆದ-ೃತೆ, ಸಮರ್ಪಣೆ ಭಾವವನ್ನು ಶ್ಲಾಘಿಸಿದರು. ಮಕ್ಕಳನ್ನು

ಬಿಳ್ಕೊಟ್ಟ ಪೋಷಕರು ಭಾವುಕ ವಿಮಾನ ಏರುತ್ತಿದ್ದಂತೆ ವಿದ್ಯಾರ್ಥಿಗಳು ತಮ್ಮ ಬೋರ್ಡಿಂಗ್ ಪಾಸ್‌ಗಳನ್ನು ಹಿಡಿದು ತಮ್ಮ ಆಸನಗಳಲ್ಲಿ ಕೂತ ಫೋಟೋಗಳನ್ನು ಬಳ್ಳಾರಿ ಟ್ವಿಟ್ಜ್ (@TweetzBallari) ಎಕ್ಸ್ ಹ್ಯಾಂಡಲ್‌ನಲ್ಲಿ ಹಂಚಿಕೊಳ್ಳಲಾಗಿದೆ. ಈ ದೃಶ್ಯಗಳ ಜೊತೆಗೆ ಮಕ್ಕಳನ್ನು ಬಿಳ್ಕೊಡಲು ಏರ್‌ಪೋರ್ಟ್‌ಗೆ ಬಂದಿದ್ದ ಪೋಷಕರು, ಗ್ರಾಮಸ್ಥರಲು ಭಾವುಕರಾಗಿದ್ದು ಕಂಡು ಬಂತು.



ಪೋಷಕರು ವಿಮಾನಯಾನ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಆದರೆ ಮಕ್ಕಳ ಆಸೆ ನೆರವೇ-ರಿಸಿದ ಅಂಡಗಿ ಅವರಿಗೆ ಕೃತಜ್ಞತೆ ಸಲ್ಲಿಸಿದರು.

ಮಕ್ಕಳು ಸೇರಿ 40 ಮಂದಿ ಪ್ರಯಾಣ ಈ ವಿದ್ಯಾರ್ಥಿಗಳಲ್ಲಿ 5 ರಿಂದ 8 ನೇ ತರಗತಿಯವರೆಗೆ ತಲಾ ನಾಲ್ವರು ವಿದ್ಯಾರ್ಥಿಗಳು ಇದ್ದರು. ದೈಹಿಕ ಶಿಕ್ಷಕರು ನಡೆಸಿದ ವಿಶೇಷ ಪರೀಕ್ಷೆಯ ಅರ್ಹತೆ ಪಡೆದವರನ್ನು ವಿಮಾನಯಾನಕ್ಕೆ ಆಯ್ಕೆ ಮಾಡಲಾಗಿ-ತ್ತು. ಈ ವಿದ್ಯಾರ್ಥಿಗಳ ಜೊತೆಗೆ, ಶಿಕ್ಷಕರು, ಮಧ್ಯಾಹ್ನದ ಊಟದ ಅಡುಗೆಯವರು ಮತ್ತು ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ (SDMC) ಸದಸ್ಯರು ಸಹ ಪ್ರವಾಸದ ಭಾಗವಾದರು. ಮಕ್ಕಳು ಸೇರಿ ಒಟ್ಟು 40 ಪ್ರಯಾಣಿಕರನ್ನು ಹೊತ್ತ ವಿಮಾನ ಬಳ್ಳಾ-ರಿಯಿಂದ ಬೆಂಗಳೂರಿಗೆ ಹಾರಿತು.

## ಪ್ರಬಂಧ ಸ್ಪರ್ಧೆ–ವಿದ್ಯಾರ್ಥಿಗಳಿಗೆ ಜಾಗೃತಿ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಸ್ವೀಪ್ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಮತದಾರ ದಿನಾಚರಣೆಯ ಪ್ರಯುಕ್ತ ಜಿಲ್ಲಾಮಟ್ಟದ ಪ್ರಬಂಧ ಸ್ಪರ್ಧೆಯು ನಗರದ ಜಲ ನಿರ್ಮಲ ಸಭಾಂಗಣದಲ್ಲಿ ನಡೆಯಿತು. ಶಾಲಾ ಮಟ್ಟದಲ್ಲಿ ಹಾಗೂ ತಾಲೂಕು ಮಟ್ಟದಲ್ಲಿ ಈ ಹಿಂದೆ ನಡೆದ ಪ್ರಬಂಧ ಸ್ಪರ್ಧೆಯಲ್ಲಿ ಭಾಗಿಯಾದ ಪ್ರಬಂಧ ವಿಜೇತರು ಜಿಲ್ಲಾ ಮಟ್ಟದ ಸ್ಪರ್ಧೆಗಾಗಿ ಜಲನಿರ್ಮಲ ಸಭಾಂಗಣದಲ್ಲಿ ಸೇರಿದ್ದರು.**

ಪ್ರಜಾಪ್ರಭುತ್ವದಲಿ ಮತದಾನ ಮತ್ತು ಚುನಾವಣೆ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಪ್ರಬಂಧದ ವಿಷಯ ನೀಡಲಾಯಿತು. ಪ್ರೌಢಶಾಲೆ ವಿಭಾಗ, ಪದವಿ ಪೂರ್ವ ಕಾಲೇಜು ವಿಭಾಗ ಮತ್ತು ಪದವಿ ಮತ್ತು ವಿಶ್ವವಿದ್ಯಾಲಯಗಳ ವಿಭಾಗವಾರು ಪ್ರತ್ಯೇಕ ವಿಷಯಗಳ ಮೇಲೆ ವಿದ್ಯಾರ್ಥಿಗಳು ಪ್ರಬಂಧ ಬರೆದರು.



ಸಸಿಗೆ ನೀರು ಹಾಕಿ ಸ್ಪರ್ದೇ ಉದ್ಘಾಟಿಸಿದ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಹಾಲಸಿದ್ದಪ್ಪ ಪೂಜೇರಿ ಮಾತನಾಡಿ, ನಮ್ಮದು ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ವಿಶ್ವದಲ್ಲಿಯೇ ಭಾರತದ ಸಂವಿಧಾನವು ಲಿಖಿತ ಸಂವಿಧಾನವಾಗಿದೆ. ಬೇರೆ ದೇಶಗಳಿಗೆ ಹೋಲಿಸಿದರೆ, ನಮಗೆ ಬೇಕಾಗಿರುವಂತ ಜನನಾಯಕನನ್ನು ಆಯ್ಕೆ ಮಾಡುವಂತಹ ಅಧಿಕಾರವು ಮತದಾರ-ರಿಗೆ ಸಂವಿಧಾನಬದ್ಧವಾಗಿ ಬಂದಿದೆ.

ಮಹತ್ವದ ಮತದಾನದ ಅವಕಾಶವು 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಸಮಾನವಾಗಿ ಸಿಕ್ಕಿರುವುದು ಒಂದು ಸುವರ್ಣ ಅವಕಾಶ. ರಾಷ್ಟ್ರ ಮತ್ತು ರಾಜ್ಯ ಚುನಾವಣಾ ಆಯೋಗವು ಇಂತಹ ಪ್ರಬಂಧ ಸ್ಪರ್ಧೆಯನ್ನು ಆಯೋಜನೆ ಮಾಡುವುದರ ಮೂಲಕ ವಿದ್ಯಾರ್ಥಿಗಳಿಗೆ ಚುನಾವಣೆ ಮತ್ತು ಮತದಾನದ ಅರಿವು ಮೂಡಿಸುವಂತಹ ಕೆಲಸವನ್ನು ಮಾಡುತ್ತಿದೆ. ಚುನಾವಣೆ ಮತ್ತು ಮತದಾನ ಸಂದರ್ಭದಲ್ಲಿ ಹಲವಾರು ರೀತಿಯ ಕಾರ್ಯ ಚಟುವಟಿಕೆಗಳು ನಡೆಯುತ್ತಿದ್ದು ಅವುಗಳ ಕುರಿತು ಅರಿವನ್ನು ಮೂಡಿಸುವಂತಹ ಹಿನ್ನೆಲೆಯಲ್ಲಿ ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆಯನ್ನು ಆಯೋಜನೆ ಮಾಡಲಾಗಿದೆ.

ಇಂಥ ಸ್ಪರ್ಧೆಗಳು ವಿದ್ಯಾರ್ಥಿಗಳ ಚುನಾವಣೆ ಮತ್ತು ಮತದಾನದ ಬಗ್ಗೆ ತಿಳಿದುಕೊಳ್ಳಲು ಅವಶ್ಯಕವಾಗಿವೆ ಎಂದು ತಿಳಿಸಿದರು. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕರಾದ ಕೆ.ಡಿ. ಬಡಿಗೇರ ಅವರು ಮಾತನಾಡಿ, ನಮ್ಮ ಮತದಾನ ವ್ಯವಸ್ಥೆಯು ಪ್ರಜಾಪ್ರಭುತ್ವದ ತಳಹದಿಯಾಗಿದೆ ಎಂದರು. ಈ ಪ್ರಬಂಧ ಸ್ಪರ್ಧೆಯನ್ನು ರಾಯಚೂರ ಜಿಲ್ಲೆಯಲ್ಲಿ ಅಚ್ಚುಕಟ್ಟಾಗಿ ನಡೆಸಿ ರಾಷ್ಟ್ರೀಯ ಮತದಾರ ದಿನಾಚರಣೆಯನ್ನು ಯಶಗೊಳಿಸಲು ಶ್ರಮಿಸಿರುವುದು ಅಭಿನಂದನಾರ್ಹ ಸಂಗತಿ ಎಂದರು.

ರಾಷ್ಟ್ರೀಯ ಮತದಾರ ದಿನಾಚರಣೆ ಕಾರ್ಯಕ್ರಮದ ಶಾಲಾ ಶಿಕ್ಷಣ ವಿಭಾಗದ ನೋಡಲ್ ಅಧಿಕಾರಿ ಡಾ. ದಂಡಪ್ಪ ಬಿರಾದಾರ ಮಾತನಾಡಿ, ನಮ್ಮ ದೇಶದಲ್ಲಿ ಚುನಾವಣೆಗಳು ಮತ್ತು ಮತದಾನ ಪ್ರಕ್ರಿಯೆಗಳು ನಿರಂತರವಾಗಿ ನಡೆಯುತ್ತವೆ. ಒಂದು ಮತ ದೇಶಕೆ ಹಿತ. ನನ್ನ ಮತ ನನ್ನ ಧ್ವನಿ. ಮತದಾನಕ್ಕೆ ಮಹತ್ವ ಶಕ್ತಿ ಇದೆ ಎಂಬುದನ್ನು ಎಲ್ಲರೂ ಅರಿಯಬೇಕು ಎಂದು ತಿಳಿಸಿದರು. ಸಮಾರಂಭದಲ್ಲಿ ಪದವಿ ಪೂರ್ವ ಶಿಕ್ಷಣ ವಿಭಾಗದ ಮಂಜುನಾಥ್, ಆದಿಕವಿ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಚನ್ನಬಸವ, ಡಾ.ಶಂಕರನಂದಾ ಜಿ. ಉಪಸಿತರಿದ್ದರು.

## ಪ್ರತಿಯೊಬ್ಬರು ಕಾನೂನು ಪಾಲನೆ ಮಾಡಿ: ಗುರುಚಂದ್ರ ಯಾದವ್ ಪಿಎಸ್ಐ

ನೈಜ್ಯ ದೆಸೆ ನ್ಯೂಸ್

**ಮಸ್ಕಿ ತಾಲೂಕಿನ ಹಾಲಾಪೂರದ ಜನನಿ ಪದವಿ ಪೂರ್ವ ಕಾಲೇಜಿನಲ್ಲಿ ಕವಿತಾಳ ಪೊಲೀಸ್ ಠಾಣೆ ವತಿಯಿಂದ ಅಪರಾಧ ತಡೆ ಮಾಸಾಚರಣೆ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದ ಕುರಿತು ಪಿಎಸ್ಐ ಗುರುಚಂದ್ರ ಯಾದವ್ ಮಾತಾಡುತ್ತಾ ಪ್ರತಿಯೊಬ್ಬರು ಕಾನೂನು ಪಾಲಿಸಬೇಕು, ಕಾನೂನು ನಮ್ಮೆಲ್ಲರಿಗೂ ಅವಶ್ಯಕ.**




**ವಿದ್ಯಾರ್ಥಿಗಳು ನೀವು ವಿಶೇಷವಾಗಿ ಯಾವುದೇ ಕೆಟ್ಟ ಚಟಗಳಿಗೆ ಬಲಿಯಾಗದೆ ಅಭ್ಯಾಸ ಕಡೆ ಗಮನ ಕೊಡಿ ಹಾಗೇ ವಿದ್ಯಾರ್ಥಿನಿಯರು ಬಾಲ್ಯ ವಿವಾಹ ತಡೆಗಟ್ಟವಲ್ಲಿ ನಿಮ್ಮ ಪಾತ್ರ ದೊಡ್ಡದು ಸಹಕರಿಸಬೇಕು, ಇಂದು ನಿಮಗಾಗಿ ಸರ್ಕಾರ ಅನೇಕ ಕಾನೂನಗಳನ್ನು ರೂಪಿಸಿದ್ದು ಸರಿಯಾಗಿ ಸದ್ಬಳಿಕೆ ಮಾಡಿಕೊಂಡು ಸಮಾಜದಲ್ಲಿ ಉನ್ನತ ಹುದ್ದೆ ಹೊಂದಿ ಆದ-ರ್ಶ ಪುರುಷರಾಗಿ ಬದುಕಬೇಕೆಂದು ಪಿಎಸ್ಐ ಗುರುಚಂದ್ರ ಯಾದವ್ ಹೇಳಿದರು. ಈ ಸಂದರ್ಭದಲ್ಲಿ ಉಪನ್ಯಾಸಕರಾದ ಸಿದ್ದಾರ್ಥ್ ಪೂ.ಪಾ , ಮರಿಸ್ವಾಮಿ, ವೀರೇಶ ಜೆ, ರಾಮಣ್ಣ ನಾಯಕ್, ದುರ್ಗೇಶ್, ಮಲ್ಲಿಕಾರ್ಜುನ ಪೊಲೀಸ್ ಇದ್ದರು**

## ಅಂಬಾದೇವಿ ಜಾತ್ರೆಗೆ ಸಿಎಂ, ಡಿಸಿಎಂ, ಸಚಿವರು, ಆಗಮನ ಸಕಲ ಸಿದ್ದತೆಗೆ ಪೂರ್ವಭಾವಿ ಸಭೆ.

ನೈಜ್ಯ ದೆಸೆ ನ್ಯೂಸ್

**ತಾಲೂಕಿನ ಸಿದ್ದಪರ್ವತ ಬಗಳಾಮುಖಿ ಅಂಬಾಮಠದ ಅಂಬಾದೇವಿ ಜಾತ್ರೆ ಜ.2 ರಿಂದ ಪ್ರಾರಂಭವಾಗಲಿದ್ದು, ಬಹಳ ವಿಶೇಷವಾಗಿ ಜ.3 ರಂದು ನಡೆವ ರಥೋತ್ಸವ ಹಾಗೂ ವಿವಿಧ ಕಾಮಗಾರಿಗಳ ಶಂಕು ಸ್ಥಾಪನೆಗಾಗಿ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಸಚಿವರು, ಶಾಸಕರು, ಈ ಭವ್ಯವಾದ ಕಾರ್ಯಕ್ರಮಕ್ಕೆ ಆಗಮಿಸಿ ಚಾಲನೆ ನೀಡಲಿದ್ದಾರೆ ಎಂದು** ಶಾಸಕ ಹಂಪನಗೌಡ ಬಾದರ್ಲಿ ಹೇಳಿದರು.

ನಗರದ ಕೋಟೆ ಈರಣ್ಣ ದೇವಸ್ಥಾನದಲ್ಲಿ ಶನಿವಾರ ಅಂಬಾದೇವಿ ಜಾತ್ರೆಯ ಪೂರ್ವಭಾವಿ ಸಭೆ ನೇತ್ರತ್ವ ವಹಿಸಿ ಮಾತನಾಡಿದ ಅವರು, ವಿವಿಧ ಇಲಾಖೆಗಳ ಅನುದಾನದಲ್ಲಿ ಅಭಿವೃದ್ಧಿ




ಕೆಲಸಗಳ ಶಂಕು ಸ್ಥಾಪನೆ, ಉದ್ಘಾಟನೆ ಮಾಡುವರು, ರಥೋತ್ಸವ ಬೀದಿ, ಜಾತ್ರೆಗಳಲ್ಲಿ 800 ವ್ಯಾಪಾರಸ್ಥರಿಗೆ ಅಂಗಡಿ ವ್ಯವಸ್ಥೆ, 15 ಕೋಟಿ ವೆಚ್ಚದಲ್ಲಿ ಗರ್ಭಗುಡಿ ಹಾಗೂ ಮಂಟಪ ಮುಕ್ತಾಯಗೊಳ್ಳಲಿದೆ.

ಜ.2 ರಿಂದ 6 ರವರೆಗೆ 5 ದಿನಗಳ ಕಾಲ ರಾಜ್ಯದ ಖ್ಯಾತ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ಅಂಬಾದೇವಿ ಜಾತ್ರೆಯ ನಿಮಿತ್ತ ಶಾಲಾ ಕಾಲೇಜು ವಿದ್ಯಾರ್ಥಿಗಳಿಗಾಗಿ 15 ಉಚಿತ ಬಸ್ ವ್ಯವಸ್ಥೆಯು ಮಾಡಲಾಗಿದೆ. ಇದರ ಸದುಪಯೋಗ ಪಡಿಸಿಕೊಳ್ಳಬೇಕು. ನಾಲ್ಕೈದು ರಾಜ್ಯಗಳಿಂದ ಐದಾರು ಲಕ್ಷ ಭಕ್ತರು ಅಂಬಾದೇವಿ ಜಾತ್ರೆಗೆ ಆಗಮಿಸುವ ನಿರೀಕ್ಷೆಯಿದೆ. ಕಾರಣ ತುಂಬಾ ಅಚ್ಚುಕಟ್ಟಾಗಿ ಅದ್ದೂರಿಯಾಗಿ ಜರುಗುವಂತೆ ನೋಡಿಕೊಳ್ಳುವ ಜವಬ್ದಾರಿ ಅಧಿಕಾರಿಗಳು ಮತ್ತು ನಮ್ಮೆಲ್ಲರ ಮೇಲಿದೆ ಎಂದರು.


ಈ ವೇಳೆ: ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರಾದ ಬಾಬುಗೌಡ ಬಾದರ್ಲಿ, ಸದಸ್ಯರಾದ ಖಾಜಿ ಮಲ್ಲಿಕ್, ವೈ.ನರೇಂದ್ರನಾಥ, ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಬಸವರಾಜ ಹಿರೇಗೌಡ, ವೈ.ಅನಿಲಕುಮಾರ, ಕಾಂಗ್ರೆಸ್ ಮುಖಂಡರಾದ ತಿಮ್ಮಪ್ಪನಾಯಕ, ಮರಿಯಪ್ಪ, ಪಕ್ಷದ ಮುಖಂಡರು, ಸೇ-ರಿದಂತೆ ನೂರಾರು ಕಾರ್ಯಕರ್ತರು, ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿದ್ದರು.

# ಮಾನ್ವಿ ತಾಲೂಕು ಕಂಡ ಅಪರೂಪದ ಶಿಕ್ಷಣ ಸಂಯೋಜಕ ವಿದ್ಯಾರ್ಥಿಗಳ ನೆಚ್ಚಿನ ‘ಎನ್ ಎಂ ಎಂ ಎಸ್ ಸರ್’ ಮಹ್ಮದ್ ಅಬ್ದುಲ್ ಯೂನುಸ್:

ನೈಜ್ಯ ದೆಸೆ ನ್ಯೂಸ್

**ಸರ್ಕಾರಿ ಸೇವೆಯನ್ನು ಕೇವಲ ಕರ್ತವ್ಯವೆಂದು ಭಾವಿಸದೇ, ಅದನ್ನೊಂದು ಸಾಮಾಜಿಕ ಜವಾಬ್ದಾ-ರಿಯಾಗಿ ಸ್ವೀಕರಿಸಿದಾಗ ಎಂತಹ ಅದ್ಭುತ ಬದಲಾವಣೆ ತರಬಹುದು ಎಂಬುದಕ್ಕೆ ಶ್ರೀ ಮೊಹಮ್ಮದ್ ಅಬ್ದುಲ್ ಯೂನುಸ್ ಅವರೇ ಸಾಕ್ಷಿ. ಮಾನವಿ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದಲ್ಲಿ ಆರು ವರ್ಷಗಳ ಕಾಲ ಶಿಕ್ಷಣ ಸಂಯೋಜಕರಾಗಿ ಇವರು ಸಲ್ಲಿಸಿದ ಸೇವೆ ಇಡೀ ಜಿಲ್ಲೆಗೆ ಮಾದರಿಯಾಗಿದೆ.**

ಯೂನುಸ್ ಅವರ ಸಾಧನೆಯ ಹಿಂದೆ ಕ್ಷೇತ್ರ ಶಿಕ್ಷಣಾಧಿಕಾರಿಗಳ (BEO) ಸಮರ್ಥ-ರ್ ಮಾರ್ಗದರ್ಶನ ಹಾಗೂ ಇಲಾಖೆಯ ಉನ್ನತ ಅಧಿಕಾರಿಗಳ ಪ್ರೋತ್ಸಾಹ ದೊಡ್ಡದಿದೆ. ಇಲಾಖೆ ನೀಡುವ ಜವಾಬ್ದಾರಿಯನ್ನು ಅತ್ಯಂತ ಸೃಜನಶೀಲವಾಗಿ ನಿಭಾಯಿಸುತ್ತಿದ್ದ ಇವರು, ಪ್ರತಿಯೊಂದು ಹಂತದಲ್ಲೂ ಮುಖ್ಯಗುರುಗಳು ಮತ್ತು ಸಹೋದ್ಯೋಗಿ ಶಿಕ್ಷಕರನ್ನು ವಿಶ್ವಾಸಕ್ಕೆ ಪಡೆದು ಕೆಲಸ ಮಾಡುತ್ತಿದ್ದರು. ಶಿಕ್ಷಕ ಸ್ನೇಹಿ ಅಧಿಕಾರಿಯಾಗಿ ಇವರ ಕಾರ್ಯ ಇಂದಿಗೂ ಶಿಕ್ಷಕರ ವಲಯದಲ್ಲಿ ಹಸಿರಾಗಿದೆ. ಒಬ್ಬ ಅಧಿಕಾರಿಯ ಸಾಧನೆಯನ್ನು ಅವರ ಹುದ್ದೆಗಿಂತಲೂ ಹೆಚ್ಚಾಗಿ ವಿದ್ಯಾರ್ಥಿಗಳು ಅವ-ರಿಗೆ ನೀಡುವ ಪ್ರೀತಿಯ ಹೆಸರುಗಳು ಅಳೆಯುತ್ತವೆ.




ಮಾನವಿ ತಾಲೂಕಿನಲ್ಲಿ ಶ್ರೀ ಮೊಹಮ್ಮದ್ ಅಬ್ದುಲ್ ಯೂನುಸ್ ಎನ್ನುವ ಹೆಸರಿಗಿಂತಲೂ, ವಿದ್ಯಾರ್ಥಿಗಳ ಪಾಲಿಗೆ ಅವರು ‘ಎನ್ ಎಂ ಎಂ ಎಸ್ ಸರ್’ ಮತ್ತು ‘ಟಾರ್ಗೆಟ್ 625 ಸರ್’ ಎಂದೇ ಚಿರಪರಿಚಿತ. ವಿದ್ಯಾರ್ಥಿಗಳ ನೆಚ್ಚಿನ 'NMMS' ಮತ್ತು 'Target-625' ಸರ್ NMMS ನೋಡಲ್ ಅಧಿಕಾರಿ: 8ನೇ ತರಗತಿ ಮಕ್ಕಳಿಗೆ ?48,000 ವಿದ್ಯಾರ್ಥಿ ವೇತನ ತಂದುಕೊಡುವ ಓಒಒಖ ಪರೀಕ್ಷೆಗಾಗಿ ಶಾಲೆಗಳಿಗೆ ಭೇಟಿ ನೀಡಿ ಜಾಗೃತಿ ಮೂಡಿಸಿದ್ದ-ರಿಂದ, ಕಳೆದ 5 ವರ್ಷಗಳಲ್ಲಿ ಪ್ರತಿ ವರ್ಷ 35ಕ್ಕೂ ಹೆಚ್ಚು ವಿದ್ಯಾರ್ಥಿಗಳು ಉತ್ತೀರ್ಣರಾಗುತ್ತಿದ್ದಾರೆ. ಖಖಐಅ ಪ್ರೇರಕ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ನೋಡಲ್ ಅಧಿಕಾರಿಯಾಗಿ ಇವರು ಸ್ವತಃ ಸಿದ್ಧಪಡಿಸಿದ ’ಟಾರ್ಗೆಟ್-625’ ಪಿಪಿಟಿ ಮೂಲಕ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬಿದರು. ಇದರ ಫಲವಾಗಿ ತಾಲೂಕಿನ ನಾಲ್ವರು ವಿದ್ಯಾರ್ಥಿಗಳು ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದು ದಾಖಲೆ ಬರೆದಿದ್ದಾರೆ.

ದಾನಿಗಳ ನೆರವಿನಿಂದ ಶಾಲೆಗಳ ಮುಖಪುಟವನ್ನೇ ಬದಲಿಸಿದ ಇವರು: ನಗು ಫೌಂಡೇಶನ್: ಮಾಡಗಿರಿ ಶಾಲೆಗೆ 1.5 ಲಕ್ಷ ವೆಚ್ಚದ ಬಾಲಕಿಯರ ಶೌಚಾಲಯ ಹಾಗೂ 10ಕ್ಕೂ ಹೆಚ್ಚು ಶಾಲೆಗಳಿಗೆ ಕ್ರೀಡಾ ಸಾಮಗ್ರಿ. ಯೂತ್ ಫಾರ್ ಸೇವಾ: ಆರು ಶಾಲೆಗಳ ಮಕ್ಕಳಿಗೆ ಎಜುಕೇಶನ್ ಕಿಟ್ ಮತ್ತು ಶಿಕ್ಷಕರಿಗೆ ವಿಶೇಷ ತರಬೇತಿ.

ಬ್ಲಾಕ್ ಕಲರ್ ಫಾರ್ ಬ್ರೈಟ್ ಫ್ಯೂಚರ್: ಕಲ್ಲೂರು, ಮಾನವಿ ಮತ್ತು ಪೋತ್ನಾಳ ವಲಯದ ಎಲ್ಲಾ ಶಾಲೆಗಳ ಕಪ್ಪು ಹಲಗೆಗಳಿಗೆ ದಾನಿಗಳ ನೆರವಿನಿಂದ ಬಣ್ಣ ಬಳಿಯುವ ವಿನೂತನ ಕಾರ್ಯ. ದತ್ತು ಯೋಜನೆ: ಕೃಷ್ಣನಗರ ಕಲ್ಲೂರು ಶಾಲೆಯನ್ನು ದತ್ತು ಪಡೆದು ಖಾಸಗಿ ಶಾಲೆಗಳಿಗೆ ಸವಾಲು ಹಾಕುವಂತೆ ಅಭಿವೃದ್ಧಿಪಡಿಸಿದ್ದು ಇವರ ಅತಿದೊಡ್ಡ ಸಾಧನೆ.

ಯೂನುಸ್ ಅವರ ಕಾರ್ಯವೈಖ-ರಿಯಿಂದ ಪ್ರೇರಣೆಗೊಂಡ ಮಾನವಿಯ ಗಫೋರ್ ಮೆಮೋರಿಯಲ್ ಎಜ್ಯುಕೇಷನಲ್ ಟ್ರಸ್ಟ್, ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡುತ್ತಾ ಬಂದಿದೆ. ಕನ್ನಡ ಕಲಿಕಾ ಕ್ರಾಂತಿ: ಈ ಟ್ರಸ್ಟ್ ಹಾಗೂ ರಾಯಚೂರಿನ ಕಲಾಂ ಎಜ್ಯುಕೇಷನ್ ಟ್ರಸ್ಟ್ ಸಹಯೋಗದೊಂದಿಗೆ ’ನನ್ನ ಶಾಲೆ ನನ್ನ ಕೊಡುಗೆ’ ಕಾರ್ಯಕ್ರಮದಡಿಯಲ್ಲಿ ಕಳೆದ ಮೂರು ವರ್ಷಗಳಿಂದ ’ವಿದ್ಯಾರ್ಥಿಗಳಿಗೆ ಬನ್ನಿ ಕನ್ನಡ ಕಲಿಯೋಣ’ ಎಂಬ ವಿಶೇಷ ಅಭಿಯಾನವನ್ನು ಆಯೋಜಿಸಲಾಗಿತ್ತು. ಈ ಯೋಜನೆಗಾಗಿ ಪ್ರತ್ಯೇಕ ಶಿಕ್ಷಕರನ್ನು ನೇಮಿಸಿ, ಅವರಿಗೆ ಟ್ರಸ್ಟ್ ವತಿಯಿಂದಲೇ ವೇತನ ನೀಡಿ ವಿದ್ಯಾರ್ಥಿಗಳಲ್ಲಿ ಕನ್ನಡ ಭಾಷೆಯ ಬಗ್ಗೆ ಆಸಕ್ತಿ ಮೂಡಿಸಿರುವುದು ಇವರ ದೂರದೃಷ್ಟಿಗೆ ಸಾಕ್ಷಿ. ಪ್ರತಿಭಾ ಪುರಸ್ಕಾರ: ಎನ್‌ಎಂಎಂಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಬಡ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಕಳೆದ ನಾಲ್ಕು ವರ್ಷಗಳಿಂದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಈ ಟ್ರಸ್ಟ್ ಮೂಲಕ ಯಶಸ್ವಿಯಾಗಿ ನಡೆಸಿಕೊಂಡು ಬರಲಾಗುತ್ತಿದೆ.

’ಅಕ್ಷರ ಟ್ರೋಫಿ’ ಕ್ರಿಕೆಟ್ ಟೂರ್ನಿ: ಶಿಕ್ಷಕರಲ್ಲಿ ಕ್ರೀಡಾ ಚೈತನ್ಯ ಯೂನುಸ್ ಅವರು ಕೇವಲ ಶೈಕ್ಷಣಿಕ ಚಟುವಟಿ-ಕೆಗಳಿಗೆ ಸೀಮಿತವಾಗದೆ, ಶಿಕ್ಷಕರ ಮಾನಸಿಕ ಮತ್ತು ದೈಹಿಕ ಆರೋಗ್ಯದ ದೃಷ್ಟಿಯಿಂದ ರಜೆಯ ಅವಧಿಯಲ್ಲಿ ’ಅಕ್ಷರ ಟ್ರೋಫಿ’ ಕ್ರಿಕೆಟ್ ಟೂರ್ನಿಯನ್ನು ಆಯೋಜಿಸುತ್ತಿದ್ದರು. ಇದು ಶಿಕ್ಷಕರ ವಲಯದಲ್ಲಿ ಅತ್ಯಂತ ಜನಪ್ರಿಯವಾಗಿದ್ದು, ಶಿಕ್ಷಕರಲ್ಲಿ ಅಡಗಿರುವ ಕ್ರೀಡಾ ಪ್ರತಿಭೆಗೆ ದೊಡ್ಡ ವೇದಿಕೆಯನ್ನು ಒದಗಿಸಿತು.

ಈ ಮೂಲಕ ಶಿಕ್ಷಕರಲ್ಲಿ ಸ್ನೇಹಭಾವ ಮತ್ತು ಒಗ್ಗಟ್ಟನ್ನು ಮೂಡಿಸುವಲ್ಲಿ ಇವರು ಯಶಸ್ವಿಯಾಗಿದ್ದಾರೆ. ರಾಷ್ಟ್ರಮಟ್ಟದ ಗೌರವ ಪರಿಶಿಷ್ಟ ಪಂಗಡ ಇಲಾಖೆಯ ’ಆದಿ ಕರ್ಮಯೋಗಿ’ ಅಭಿಯಾನದ ಜಿಲ್ಲಾ ಉತ್ತಮ ಸಂಪನ್ಮೂಲ ವ್ಯಕ್ತಿಯಾಗಿ ನವದೆಹಲಿಯಲ್ಲಿ ನಡೆದ ರಾಷ್ಟ್ರಪತಿಯವರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಇವರ 17 ವರ್ಷಗಳ ಸೇವೆಗೆ ಸಂದ ಗೌರವವಾಗಿದೆ. ಪ್ರಸ್ತುತ ಯರಮರಸ್ ಆದರ್ಶ ವಿದ್ಯಾಲಯದಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಇವರ ಶೈಕ್ಷಣಿಕ ಪಯಣ ಯಶಸ್ವಿಯಾಗಿ ಮುಂದುವರಿಯಲಿ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINT-ERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101